   Every plant, tree, animal needs me
   I am not visible to anybody.

   ನಾನಿಲ್ಲದೆ ನೀನು ಒಂದು ಕ್ಷಣವಿಲ್ಲ.
   ಗಿಡ ಮರ ಪ್ರಾಣಿಗಳಿಗೂ ನಾನು ಬೇಕಲ್ಲ.
   ನಾನು ಯಾರ ಕಣ್ಣಿಗೂ ಕಾಣೋದಿಲ್ಲ.

   Who am I?
   ನಾನು ಯಾರು?_____

2. I occupy major portion of the earth
   I satisfy all your thirst
   I make animal, tree and plant cool

   ಭೂಮಿಯ ಬಹು ಭಾಗ ನಾನೇ ಇರುವೆ.
   ನಿನ್ನ ಬಾಯಾರಿಕೆ ನಾನು ನೀಗುವೆ.
   ಗಿಡಮರ ಪ್ರಾಣಿಗಳಿಗೆ ತಂಪು ಕೊಡುವೆ.

   Who am I?
   ನಾನು ಯಾರು?_____

3. I let you live on me
   I help to grow plants and trees
   I support all life on me

   ನನ್ನ ಮೇಲೆ ನೀನಿರುವೆ.
   ಸಸ್ಯ ಬೆಳೆಯಲು ನೆರವಾಗುವೆ
   ಜೀವರಾಶಿಗೆ ಆಸರೆಯಾಗುವೆ.

   Who am I?
   ನಾನು ಯಾರು?_____

© KTBS NOT TO BE REPUBLISHED

4. I give fruits and nuts
I spread cooling shades
No life without me

ಹಣ್ಣು, ಕಾಯಿ ನೀಡುವೆ
ತಂಪು ನೆರಳು ಕೊಡುವೆ,
ನಾನಿಲ್ಲದೆ ಜೀವ ಜಾಲವಿಲ್ಲ

Who am I?
ನಾನು ಯಾರು?_____

5. Vehicles like bus, lorry and car use me to run
Took thousands of years to form me
From underneath the soil you extract me.

ಬಸ್ಸು, ಲಾರಿ, ಕಾರು ಚಲಿಸಲು ನಾನು ಬೇಕು
ನಾನು ತಯಾರಾಗಲು ಸಾವಿರಾರು ವರ್ಷ ಬೇಕು.
ಭೂಮಿಯೊಳಗಿನಿಂದ ನನ್ನ ತೆಗೆಯಬೇಕು

Who am I?
ನಾನು ಯಾರು?_____

6. Plate, tumbler and vessels are made up of me
Beautiful jewels are made up of me
My ore will be hardened by you

ಪಾತ್ರೆ ತಟ್ಟೆ, ಲೋಟ ಚೆಂಬು ಎಲ್ಲವೂ ನನ್ನಿಂದ
ನಿನ್ನ ಕಿವಿ, ಕಾಲ್ಗೆ ನಾನೇ ಅಂದ, ನಿನಗಾನಂದ.
ಅದಿರು ರೂಪದಿ ಬಂದು ಗಟ್ಟಿಯಾಗುವೆ ನಿನ್ನಿಂದ

Who am I?
ನಾನು ಯಾರು?_____

7. Darkness drives away from me
Bright light comes from me
A source of energy, that is me

@KTBS NOT TO BE REPUBLISHED

ಕತ್ತಲ ಕಳೆಯುವೆ
ಬೆಳಕನು ನೀಡುವೆ
ಶಕ್ತಿಯ ಮೂಲವು ನಾನಾಗಿರುವೆ

Who am I?
ನಾನು ಯಾರು?_____

Generally natural resources can be classified as renewable and non-renewable resources.

ನೈಸರ್ಗಿಕ ಸಂಪನ್ಮೂಲಗಳನ್ನು ಸಾಮಾನ್ಯವಾಗಿ ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳಾಗಿ ವಿಂಗಡಿಸಬಹುದು.

1. Renewable resources

ನವೀಕರಿಸಬಹುದಾದ ಸಂಪನ್ಮೂಲಗಳು.

Resources like solar energy, air, water, soil, forest etc., are available in nature inspite of their usage. Since these are continuosly available over the period of human life time, these resources are called **renewable resources.**

ಸೌರಶಕ್ತಿ, ವಾಯು (ಗಾಳಿ), ನೀರು, ಮಣ್ಣು ಮತ್ತು ಕಾಡು (ಅರಣ್ಯ) ಗಳಂತಹ ಸಂಪನ್ಮೂಲಗಳು ಬಳಸಿದಷ್ಟೂ ದೊರಕುವಂತಹ ಸಂಪನ್ಮೂಲಗಳಾಗಿವೆ. ಮಾನವರ ಜೀವಿತಾವಧಿಯಲ್ಲಿ ಇವು ನಿರಂತರವಾಗಿ ಲಭ್ಯವಿರುವುದರಿಂದ ಈ ಸಂಪನ್ಮೂಲಗಳನ್ನು **ನವೀಕರಿಸಬಹುದಾದ ಸಂಪನ್ಮೂಲಗಳು** ಎನ್ನುವರು.

2. Non-renewable resources

ನವೀಕರಿಸಲಾಗದ ಸಂಪನ್ಮೂಲಗಳು

Resources like coal, petrol, diesel, and natural gases will run out due to their continuous usage. Such resources cannot be renewed. Hence these resources are called as **non-renewable resources.**

ಕಲ್ಲಿದ್ದಲು, ಪೆಟ್ರೋಲ್, ಡೀಸೆಲ್ ಮತ್ತು ನೈಸರ್ಗಿಕ ಅನಿಲದಂತಹ ಸಂಪನ್ಮೂಲಗಳು ಬಳಸಿದಂತೆಲ್ಲಾ ಮುಗಿದು ಹೋಗುತ್ತವೆ. ಇಂತಹ ಸಂಪನ್ಮೂಲಗಳನ್ನು ನವೀಕರಿಸಲು ಸಾಧ್ಯವಿಲ್ಲ. ಆದ್ದರಿಂದ ಈ ಸಂಪನ್ಮೂಲಗಳನ್ನು **ನವೀಕರಿಸಲಾಗದ ಸಂಪನ್ಮೂಲಗಳು** ಎನ್ನುವರು.

© NCERT NOT TO BE REPUBLISHED

Put the following resources into the suitable baskets, by drawing lines.

ಈ ಕೆಳಗೆ ಕೊಟ್ಟಿರುವ ಸಂಪನ್ಮೂಲಗಳನ್ನು ಸಂಬಂಧಿಸಿದ ಬುಟ್ಟಿಗೆ ಗೆರೆ ಎಳೆಯುವುದರ ಮೂಲಕ ಹಾಕು.

coal
ಕಲ್ಲಿದ್ದಲು

iron
ಕಬ್ಬಿಣ

petrol
ಪೆಟ್ರೋಲ್

diesel
ಡೀಸೆಲ್

cooking gas
ಅಡುಗೆ ಅನಿಲ

water
ನೀರು

oxygen
ಆಕ್ಸಿಜನ್

forest
ಕಾಡು

gold
ಚಿನ್ನ

wild animals
ವನ್ಯ ಜೀವಿಗಳು

solar energy
ಸೌರಶಕ್ತಿ



Renewable Resources

ನವೀಕರಿಸಬಹುದಾದ ಸಂಪನ್ಮೂಲಗಳು



Non-Renewable Resources

ನವೀಕರಿಸಲಾಗದ ಸಂಪನ್ಮೂಲಗಳು

©KTBS NOT TO BE REPUBLISHED

You have learnt about the types of natural resources. Let us now know about renewable resources in detail.

ಇದುವರೆಗೂ ನೀನು ನೈಸರ್ಗಿಕ ಸಂಪನ್ಮೂಲಗಳ ವಿಧಗಳನ್ನು ತಿಳಿದೆ. ಈಗ **ನವೀಕರಿಸಬಹುದಾದ ಸಂಪನ್ಮೂಲಗಳ** ಬಗ್ಗೆ ವಿವರವಾಗಿ ತಿಳಿಯೋಣ.

Solar energy

ಸೌರಶಕ್ತಿ

Solar energy is the energy obtained from the sun. Sun is the main source of heat and light to the earth. We get light and heat from the sun. You already know that plants prepare their food using solar energy.

ಸೂರ್ಯನಿಂದ ದೊರಕುವ ಶಕ್ತಿಯೇ **ಸೌರಶಕ್ತಿ**. ಸೂರ್ಯನಿಂದ ನಮಗೆ ಬೆಳಕು ಮತ್ತು ಉಷ್ಣ ದೊರೆಯುತ್ತವೆ. ಭೂಮಿಗೆ ಸೂರ್ಯನೇ ನೈಸರ್ಗಿಕ ಬೆಳಕು ಮತ್ತು ಉಷ್ಣದ ಮೂಲ. ಸೂರ್ಯನ ಶಕ್ತಿಯನ್ನು ಬಳಸಿಕೊಂಡು ಸಸ್ಯಗಳು ತಮ್ಮ ಆಹಾರವನ್ನು ತಯಾರಿಸುತ್ತವೆ ಎಂದು ನಿನಗೀಗಾಗಲೇ ಗೊತ್ತು.

©KTBS NOT TO BE REPUBLISHED

- Make a list of the activities done using solar energy.
  ಸೂರ್ಯನ ಶಕ್ತಿಯನ್ನು ಬಳಸಿ ಮಾಡಬಹುದಾದ ಕೆಲಸಗಳನ್ನು ಪಟ್ಟಿ ಮಾಡು.

_____ _____

_____ _____

_____ _____

_____ _____

_____ _____

Do this : Take two pots filled with soil. Put a bean seed in each pot. Keep one pot in a place with sunlight and another pot in a dark corner. Water the pots daily. Observe the changes after fifteen days. Record what you have observed.
ಎರಡು ಮಣ್ಣಿನ ಕುಂಡಗಳನ್ನು ತೆಗೆದುಕೊಂಡು, ಎರಡರಲ್ಲಿಯೂ ಹುರುಳಿ ಬೀಜವನ್ನು ಹಾಕು. ಒಂದು ಕುಂಡವನ್ನು ಬಿಸಿಲು ಬೀಳುವ ಜಾಗದಲ್ಲಿ, ಮತ್ತೊಂದನ್ನು ಕತ್ತಲಿರುವ ಜಾಗದಲ್ಲಿಡು. ಪ್ರತಿನಿತ್ಯವೂ ಸ್ವಲ್ಪ ನೀರನ್ನು ಎರಡು ಕುಂಡಗಳಿಗೂ ಹಾಕುತ್ತಿರು.

ಹದಿನೈದು ದಿನದ ನಂತರ ಅವುಗಳಲ್ಲಿ ಕಂಡುಬರುವ ಬದಲಾವಣೆಗಳನ್ನು ಗಮನಿಸು. ಇದರಿಂದ ನೀನೇನು ತಿಳಿದೆ ಎಂದು ಬರೆ.

_____

_____

_____

_____

_____

_____

You will learn more about solar energy in the unit **Amazing Energy.**

ಸೌರಶಕ್ತಿಯ ಬಗ್ಗೆ ಹೆಚ್ಚಿನ ವಿವರಗಳನ್ನು **ವಿಸ್ಮಯ ಶಕ್ತಿ** ಘಟಕದಲ್ಲಿ ಕಲಿಯುವೆ.

Air and water are also natural resources. You will know about these in the next units.

ವಾಯು ಮತ್ತು **ನೀರು** ಕೂಡ ನೈಸರ್ಗಿಕ ಸಂಪನ್ಮೂಲಗಳಾಗಿವೆ. ಇವುಗಳ ಬಗ್ಗೆ ಮುಂದಿನ ಪಾಠಗಳಲ್ಲಿ ತಿಳಿಯುವೆ.

Soil :

ಮಣ್ಣು :

We walk on soil. We live on soil. Soil is also a renewable resource like water. Soil is necessary for the growth of plants. You already know that plants get water and salts required to prepare their food from soil. You will know more in detail about soil in higher classes.

ನಾವು ಮಣ್ಣಿನ ಮೇಲೆ ನಡೆದಾಡುತ್ತೇವೆ. ಇದರ ಮೇಲೆಯೇ ವಾಸಿಸುತ್ತೇವೆ. ನೀರಿನಂತೆಯೇ ಮಣ್ಣು ಕೂಡ ಒಂದು ಮುಗಿಯದ ಸಂಪನ್ಮೂಲವಾಗಿದೆ. ಸಸ್ಯಗಳ ಸಹಜವಾದ ಬೆಳವಣಿಗೆಗೆ ಮಣ್ಣು ಅತ್ಯಂತ ಅವಶ್ಯಕವಾಗಿರುತ್ತದೆ. ಸಸ್ಯಗಳು ತಮ್ಮ ಆಹಾರವನ್ನು ತಯಾರಿಸಿಕೊಳ್ಳಲು ಬೇಕಾದ ನೀರು ಮತ್ತು ಲವಣಗಳನ್ನು ಮಣ್ಣಿನ ಮೂಲಕ ಪಡೆಯುತ್ತವೆ

@KTBS NOT TO BE REPUBLISHED

ಎಂಬುದನ್ನು ನೀನು ಈಗಾಗಲೇ ತಿಳಿದಿರುವೆ. ಮಣ್ಣಿನ ಬಗ್ಗೆ ಹೆಚ್ಚಿನ ವಿವರಗಳನ್ನು ಮುಂದಿನ ತರಗತಿಯಲ್ಲಿ ಕಲಿಯುವೆ.

- **Make a list of activities for which soil is used.**
  ಮಣ್ಣನ್ನು ಯಾವ ಯಾವ ಕೆಲಸಗಳಿಗೆ ಬಳಸುತ್ತಾರೆ ಎಂಬುದನ್ನು ಬರೆ.

_____

_____

_____

_____

_____



Know this : The outermost rocky layer of the earth is known as crust. Soil is the thin top layer of the crust containing minerals and organic substances. It takes nearly 500 to 1500 years for the formation of about 3 cm of soil. Soil is formed by the weathering of rocks by flowing water, blowing wind and other organisms.

ಶಿಲೆಗಳಿಂದಾದ ಭೂಮಿಯ ಮೇಲ್ಪದರ ಅಥವಾ ಚಿಪ್ಪಿನ ಪದರಗಳನ್ನು ಶಿಲಾಗೋಳ ಎನ್ನಲಾಗುತ್ತದೆ. ಖನಿಜಗಳು ಮತ್ತು ಸಾವಯವ ವಸ್ತುಗಳನ್ನು ಒಳಗೊಂಡಿರುವ ಶಿಲಾಗೋಳದ ತೆಳುವಾದ ಪದರವೇ ಮಣ್ಣು. ಇಂತಹ ಮಣ್ಣು ಸುಮಾರು 3cm ನಷ್ಟು ರೂಪುಗೊಳ್ಳಲು ಸುಮಾರು 500 ರಿಂದ 1500 ವರ್ಷಗಳು ಬೇಕಾಗುತ್ತದೆ. ಹರಿಯುವ ನೀರು, ಬೀಸುವ ಗಾಳಿ ಮತ್ತು ಜೀವಿಗಳಿಂದ ಶಿಲೆಗಳು ಶಿಥಿಲಗೊಂಡು ಮಣ್ಣು ರೂಪುಗೊಳ್ಳುತ್ತದೆ.

© KTBS NOT TO BE REPUBLISHED


What happens to the top soil in the following circumstances? Discuss with your friends.

ಈ ಸಂದರ್ಭಗಳಲ್ಲಿ ಮೇಲ್ಮಣ್ಣು ಏನಾಗುತ್ತದೆ? ಗೆಳೆಯರೊಂದಿಗೆ ಚರ್ಚಿಸು.

- When the wind is stormy
  ಜೋರಾಗಿ ಗಾಳಿ ಬೀಸಿದಾಗ
- When there is water current after rain.
  ಮಳೆ ಬಂದು ನೀರು ರಭಸವಾಗಿ ಹರಿಯುವಾಗ

The following measures are taken to preserve the top soil from erosion. Observe the pictures. Note down what you have learnt.

ಮೇಲ್ಮಣ್ಣು ಕೊಚ್ಚಿಕೊಂಡು ಹೋಗದಂತೆ ಸಂರಕ್ಷಿಸಲು ಈ ಕ್ರಮಗಳನ್ನು ಅನುಸರಿಸುತ್ತಾರೆ. ಚಿತ್ರ ನೋಡಿ, ನೀನು ಏನು ತಿಳಿದೆ ಎಂಬುದನ್ನು ಬರೆ.





_____ _____ _____

_____ _____ _____



Know this : **Contour farming :** Farming according to the shape of land to prevent soil erosion is called contour farming.

ಸಮಪಾತಳಿ ಬೇಸಾಯ : ಮಣ್ಣಿನ ಸವೆತವನ್ನು ತಡೆಗಟ್ಟಲು ಭೂಮಿಯ ಆಕಾರಕ್ಕನುಗುಣವಾಗಿ ವ್ಯವಸಾಯ ಮಾಡುವುದನ್ನು ಸಮಪಾತಳಿ ಬೇಸಾಯ ಎನ್ನುವರು.

©KTBS NOT TO BE REPUBLISHED

Forests

ಕಾಡುಗಳು


Forests are the natural habitat of wild animals and birds. They provide the necessary food and fodder to the animals and many useful materials to man.

ಕಾಡುಗಳು ಪರಿಸರದಲ್ಲಿನ ಕಾಡು ಪ್ರಾಣಿ ಮತ್ತು ಪಕ್ಷಿಗಳಿಗೆ ನೈಸರ್ಗಿಕ ಆವಾಸವನ್ನು, ಪ್ರಾಣಿಗಳಿಗೆ ಆಹಾರ ಮತ್ತು ಮೇವನ್ನು ಹಾಗೂ ಮಾನವರಿಗೆ ಅಗತ್ಯವಾದ ಅನೇಕ ವಸ್ತುಗಳನ್ನು ಒದಗಿಸುತ್ತವೆ.

Observe these pictures and make a list of the uses of forests.

ಈ ಚಿತ್ರಗಳನ್ನು ನೋಡಿ ಕಾಡುಗಳಿಂದ ನಮಗಾಗುವ ಉಪಯೋಗಗಳನ್ನು ಬರೆ.














© KSEEAB NOT TO BE REPUBLISHED





- _____
- _____
- _____
- _____
- _____
- _____
- _____
- _____

Apart from this, discuss about some other uses of forests with your friends in the class.

ಇದಲ್ಲದೆ ಕಾಡುಗಳಿಂದ ಇನ್ನೂ ಯಾವ ಉಪಯೋಗಗಳಿವೆ ಎಂಬುದನ್ನು ತರಗತಿಯಲ್ಲಿ ಸ್ನೇಹಿತರೊಂದಿಗೆ ಚರ್ಚಿಸು.

@KTBS NOT TO BE REPUBLISHED



Know this : Forests are also one of the natural resources. They provide fruits, flowers, medicinal plants, wood etc,. Forests are the shelters for tribals. Forests prevent soil erosion (washing or blowing away of top soil). The trees give out oxygen and increase its quantity in the atmosphere. Such useful and valuable forests are being destroyed for various human activities like urbanization, industrialization, construction

of dams etc,. We must not forget that **destruction of forests is destruction of life.**

ಕಾಡು ಸಹ ಒಂದು ಸ್ವಾಭಾವಿಕ ಸಂಪನ್ಮೂಲವಾಗಿದೆ. ಕಾಡುಗಳು ಹಣ್ಣು, ಹೂಗಳು, ಗಿಡಮೂಲಿಕೆಗಳು, ಮರ ಮುಟ್ಟುಗಳನ್ನು ಒದಗಿಸುತ್ತವೆ. ಕಾಡುಗಳು ಬುಡಕಟ್ಟು ಜನಾಂಗಕ್ಕೆ ಆಶ್ರಯತಾಣವೂ ಆಗಿವೆ. ಕಾಡುಗಳಿಂದ ಮಣ್ಣಿನ ಸವಕಳಿಯನ್ನು (ಮೇಲ್ಪದರದ ಮಣ್ಣು ಕೊಚ್ಚಿ ಹೋಗುವುದನ್ನು) ತಡೆಗಟ್ಟಬಹುದು. ಕಾಡಿನ ಮರಗಳಿಂದ ಆಕ್ಸಿಜನ್ ಪ್ರಮಾಣ ಹೆಚ್ಚಾಗುತ್ತದೆ. ಇಷ್ಟೆಲ್ಲಾ ಕೊಡುಗೆ ನೀಡುವ ಕಾಡುಗಳನ್ನು ನಗರಗಳ ವಿಸ್ತರಣೆ, ಕೈಗಾರಿಕೆಗಳ ಸ್ಥಾಪನೆ, ಅಣೆಕಟ್ಟು ನಿರ್ಮಾಣ – ಹೀಗೆ ಬೇರೆ ಬೇರೆ ಕಾರಣಗಳಿಗಾಗಿ ನಾಶ ಮಾಡಲಾಗುತ್ತಿದೆ. **ಕಾಡುಗಳ ನಾಶ, ಜೀವ ಸಂಕುಲದ ನಾಶ** ಎಂಬುದನ್ನು ಮರೆಯಬಾರದು.

Conservation of forests

ಕಾಡುಗಳ ಸಂರಕ್ಷಣೆ

Forests can be conserved by restricting unnecessary felling of trees, tree planting, proper usage of forest products, cutting down tree branches causing forest fire etc,. The Government has made amendment to National Forest Policy in 1988 and has taken many steps to nurture and conserve the forests.

ಮರಗಳನ್ನು ಕಡಿಯುವುದನ್ನು ನಿಯಂತ್ರಿಸುವುದು, ಗಿಡ–ಮರಗಳನ್ನು ಬೆಳೆಸುವುದು, ಕಾಡಿನ ಸರಿಯಾದ ಬಳಕೆ, ಕಾಡ್ಗಿಚ್ಚು ಉಂಟುಮಾಡುವ ಮರಗಳ ರೆಂಬೆಗಳನ್ನು ಕತ್ತರಿಸುವ ಮೂಲಕ ಕಾಡುಗಳನ್ನು ಸಂರಕ್ಷಿಸಬಹುದು. ಕಾಡುಗಳನ್ನು ಸಂರಕ್ಷಿಸಲು ಸರ್ಕಾರವು ರಾಷ್ಟ್ರೀಯ ಅರಣ್ಯ ನೀತಿಯನ್ನು 1988ರಲ್ಲಿ ಪರಿಷ್ಕರಿಸಿ, ಜಾರಿಗೆ ತಂದು ಅರಣ್ಯಗಳ ಪೋಷಣೆ, ಸಂರಕ್ಷಣೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿದೆ.



Know this

- The Government is maintaining and conserving national forests through the forest department.
  ಸರ್ಕಾರವು ಅರಣ್ಯ ಇಲಾಖೆಯ ಮೂಲಕ ರಾಷ್ಟ್ರೀಯ ಅರಣ್ಯಗಳನ್ನು ನಿರ್ವಹಿಸಿ, ಸಂರಕ್ಷಿಸುತ್ತಿದೆ.

© KTBS NOT TO BE REPUBLISHED

- Village panchayath and local community protect social forests.

  ಸಾಮಾಜಿಕ ಅರಣ್ಯಗಳನ್ನು ಗ್ರಾಮ ಪಂಚಾಯ್ತಿ ಮತ್ತು ಸಮುದಾಯದವರು ಸಂರಕ್ಷಿಸುತ್ತಾರೆ.

- National park and wild life sanctuaries - Some forests are identified and preserved along with its wild life. **Example :** Bannerughatta and Bandipura forests are protected by making many laws. Felling of trees, smuggling of wood, hunting wild animals are punishable offenses.

  ರಾಷ್ಟ್ರೀಯ ಉದ್ಯಾನಗಳು ಮತ್ತು ವನ್ಯ ಜೀವಿಧಾಮಗಳು – ಕೆಲವು ಅರಣ್ಯ ಪ್ರದೇಶಗಳನ್ನು ಗುರ್ತಿಸಿ ಕಾಡಿನೊಂದಿಗೆ ವನ್ಯ ಜೀವಿಗಳನ್ನೂ ಸಂರಕ್ಷಿಸಲಾಗಿದೆ. **ಉದಾಹರಣೆ :** ಬನ್ನೇರುಘಟ್ಟ, ಬಂಡೀಪುರ ಅರಣ್ಯಗಳನ್ನು ಸಂರಕ್ಷಿಸಲು ಕಾನೂನುಗಳನ್ನು ರೂಪಿಸಿ ಭದ್ರತೆಯನ್ನು ಒದಗಿಸಲಾಗಿದೆ. ಮರಗಳನ್ನು ಕಡಿಯುವುದು, ಮರಗಳ ಕಳ್ಳಸಾಗಣಿಕೆ, ವನ್ಯ ಪ್ರಾಣಿಗಳನ್ನು ಕೊಲ್ಲುವುದು ಅಪರಾಧವಾಗುತ್ತದೆ.

- Some religious beliefs and rituals are also helpful to conserve forests.

  ನಮ್ಮ ಹಿಂದಿನವರ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳು ಅರಣ್ಯ ಸಂರಕ್ಷಣೆಗೆ ಕಾರಣವಾಗಿದೆ.

  Example : Nagabana of Dakshina Kannada, Devarakadu located in Kodagu. Cutting down of trees is prohibited here.

  ಉದಾಹರಣೆ : ದಕ್ಷಿಣ ಕನ್ನಡ ಜಿಲ್ಲೆಯ ನಾಗಬನ, ಕೊಡಗು ಜಿಲ್ಲೆಯಲ್ಲಿ ಕಂಡುಬರುವ ದೇವರ ಕಾಡು. ಇಲ್ಲಿ ಮರಗಳನ್ನು ಕಡಿಯುವುದನ್ನು ನಿಷೇಧಿಸಲಾಗಿದೆ.

Many movements have taken place against deforestation when the implementation of several mega projects, were proposed.

ಕೆಲವು ದೊಡ್ಡ ಯೋಜನೆಗಳಿಗಾಗಿ ಅರಣ್ಯಗಳನ್ನು ಕಡಿಯುವ ಸಂದರ್ಭ ಒದಗಿದಾಗ ಅದನ್ನು ವಿರೋಧಿಸಿ ಅನೇಕ ಚಳುವಳಿಗಳು ನಡೆದಿವೆ.

© KTBS NOT TO BE REPUBLISHED



Know this

- Panduranga Hegade initiated **Appiko movement** to prevent deforestation in westerns ghats rich in diversified wild life in Karnataka.

  ಕರ್ನಾಟಕದ ಜೀವ ವೈವಿಧ್ಯದಿಂದ ಕೂಡಿದ ಪಶ್ಚಿಮ ಘಟ್ಟದ ಅರಣ್ಯಗಳ ನಾಶವನ್ನು ತಡೆಗಟ್ಟಲು ಪಾಂಡುರಂಗ ಹೆಗಡೆಯವರು **ಅಪ್ಪಿಕೊ ಚಳುವಳಿ** ಪ್ರಾರಂಭಿಸಿದರು.

- Environmentalists of Kerala successfully stopped a hydro electric power scheme proposed by the Government in biodiverse silent valley by conducting **silent valley movement**.

  ಕೇರಳದಲ್ಲಿರುವ ಜೀವ ವೈವಿಧ್ಯ ತಾಣವಾದ ಮೌನ ಕಣಿವೆಯಲ್ಲಿ ಜಲ ವಿದ್ಯುತ್ ಯೋಜನೆ ಪ್ರಾರಂಭಿಸಲು ಸರ್ಕಾರ ಯತ್ನಿಸಿದಾಗ ಪರಿಸರವಾದಿಗಳು **ಮೌನ ಕಣಿವೆ** ಹೋರಾಟದ ಮೂಲಕ ಯೋಜನೆಯನ್ನು ತಡೆಹಿಡಿದರು.

- **Save forests (the jungle bachao) movement** triggered in Bihar for the conservation of forests reached even Jarkhand and Odisha and saved many forests.

  ಬಿಹಾರದ ಅರಣ್ಯಗಳ ಸಂರಕ್ಷಣೆಗಾಗಿ ಪ್ರಾರಂಭವಾದ **ಕಾಡನ್ನು ಉಳಿಸಿ (ಜಂಗಲ್ ಬಚಾವೊ)** ಆಂದೋಲನ ಜಾರ್ಖಂಡ್ ಮತ್ತು ಒಡಿಶಾಗೂ ಹರಡಿ ಅರಣ್ಯಗಳ ಸಂರಕ್ಷಣೆಗೆ ಕಾರಣವಾಯಿತು.

- Sundar lal Bahuguna opposed cutting down of trees by the well known **Chipko movement** in Himalayan region and thus saved many forests.

  ಹಿಮಾಲಯದಲ್ಲಿನ ಅರಣ್ಯಗಳ ಸಂರಕ್ಷಣೆಗಾಗಿ ಸುಂದರ್‌ಲಾಲ್ ಬಹುಗುಣರವರು **ಚಿಪ್ಕೊ ಚಳುವಳಿ** ಪ್ರಾರಂಭಿಸಿ ಮರಗಳ ನಾಶವನ್ನು ತಡೆಹಿಡಿದರು.

@KTBS NOT TO BE REPUBLISHED

- Conservation of forests is everyone's responsibility. Why? Write here.

  ಅರಣ್ಯಗಳ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ಏಕೆ? ಇಲ್ಲಿ ಬರೆ.

_____

_____

_____

_____


_____

_____

_____

_____

@KTBS NOT TO BE REPUBLISHED



Know this



Salumarada Thimmakka, a proud daughter of Karnataka is known as **Vruksha mathe** throughout the country. Daughter of Vijayamma and Chikkarangaiah of Gubbi taluk, Tumkur district, Thimmakka was married to Bikkala Chikkaiah of Hulikal village in Magadi Taluk and stayed there. Later on, she has planted and nurtured Banian trees on the both the sides of road from her village Hulikal to Kudur with the help of her husband.

ವೃಕ್ಷ ಮಾತೆ ಎಂದೇ ದೇಶದಾದ್ಯಂತ ಪ್ರಖ್ಯಾತಿ ಪಡೆದಿರುವ ಸಾಲು ಮರದ ತಿಮ್ಮಕ್ಕ ಕರ್ನಾಟಕದ ಹೆಮ್ಮೆಯ ಸುಪುತ್ರಿ. ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ವಿಜಯಮ್ಮ ಮತ್ತು ಚಿಕ್ಕರಂಗಯ್ಯ ದಂಪತಿಗಳ ಮಗಳಾದ ತಿಮ್ಮಕ್ಕ ಮಾಗಡಿ ತಾಲ್ಲೂಕಿನ ಹುಲಿಕಲ್ ಗ್ರಾಮದ ಬಿಕ್ಕಲ ಚಿಕ್ಕಯ್ಯನವರನ್ನು ವಿವಾಹವಾಗಿ, ಹುಲಿಕಲ್ಲಿನಲ್ಲಿ ವಾಸ್ತವ್ಯ ಹೂಡುತ್ತಾರೆ.

ಆನಂತರದ ದಿನಗಳಲ್ಲಿ ತನ್ನ ಪತಿಯ ಸಹಕಾರದೊಂದಿಗೆ ತಮ್ಮ ಊರಾದ ಹುಲಿಕಲ್‌ನಿಂದ ಕುದೂರಿನವರೆಗೆ ರಸ್ತೆಯ ಇಕ್ಕೆಡೆಗಳಲ್ಲಿ ಆಲದ ಮರಗಳನ್ನು ನೆಟ್ಟು, ಪೋಷಿಸಿ ಬೆಳೆಸುತ್ತಾರೆ.

Considering these trees as her children, Thimmakka dedicated her entire life for them. Hence centenarian Thimmakka is called **Salumarada Thimmakka.** The Governament of Karnataka has declared a project called **Salumarada Thimmakkana Neralu Yojane** in its budget 2014-15.

ಹೀಗೆ ಮರಗಳನ್ನು ಮಕ್ಕಳೆಂದು ಭಾವಿಸಿ ಅವುಗಳ ಪಾಲನೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುವ ಶತಾಯುಷಿ ತಿಮ್ಮಕ್ಕನವರನ್ನು **ಸಾಲು ಮರದ ತಿಮ್ಮಕ್ಕ** ಎಂದು ಕರೆಯಲಾಗುತ್ತಿದೆ. ಇವರ ಗೌರವಾರ್ಥವಾಗಿ ಕರ್ನಾಟಕ ಸರ್ಕಾರವು 2014–15 ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ **ಸಾಲು ಮರದ ತಿಮ್ಮಕ್ಕ ನ ನೆರಳು ಯೋಜನೆ**ಯನ್ನು ಘೋಷಿಸಿ ಜಾರಿಗೆ ತಂದಿರುತ್ತದೆ.

Hundreds of awards have been conferred for her immense concern towards nature. The important awards are -


ಪರಿಸರ ಕಾಳಜಿಗೆ ಪ್ರಶಂಸಿಸಿ ನೂರಾರು ಪ್ರಶಸ್ತಿಗಳು ಅವರನ್ನು ಅರಸಿಕೊಂಡು ಬಂದಿರುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ –

* Nadoja Award - Kannada University, Hampi.
  ನಾಡೋಜ ಪ್ರಶಸ್ತಿ – ಕನ್ನಡ ವಿಶ್ವವಿದ್ಯಾಲಯ, ಹಂಪಿ.
* Karnataka Rajyotsava award.
  ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ.
* Karnataka Rajya Parisara award.
  ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ.
* Indira Priyadarshini Vruksha Mitra Award - Government of India.
  ಇಂದಿರಾ ಪ್ರಿಯದರ್ಶಿನಿ ವೃಕ್ಷ ಮಿತ್ರ ಪ್ರಶಸ್ತಿ – ಭಾರತ ಸರ್ಕಾರ.
* Parisara Rathna Award.
  ಪರಿಸರ ರತ್ನ ಪ್ರಶಸ್ತಿ.

NOT TO BE REPUBLISHED @KTBS

Salumarada Thimmakka is a role model for all of us in the conservation of environment. Her concern towards environment is unique and it should be followed by us.

ಪರಿಸರ ಸಂರಕ್ಷಣೆಯಲ್ಲಿ ನಮ್ಮೆಲ್ಲರಿಗೂ ಮಾದರಿಯಾಗಿರುವ ಸಾಲುಮರದ ತಿಮ್ಮಕ್ಕನವರ ಪರಿಸರದ ಮೇಲಿನ ಕಾಳಜಿ ಅನನ್ಯ ಹಾಗೂ ಅನುಕರಣೀಯ.



Know this : Animals are also renewable resources. Because, they enhance their population by reproduction. Sometimes hunting of wild animals leads to the extinction of their race and thereby make them non renewable sources. It is our duty to conserve such resources.

ಪ್ರಾಣಿಗಳು ಕೂಡ ನವೀಕರಿಸಬಹುದಾದ ಸಂಪನ್ಮೂಲವಾಗಿವೆ. ಏಕೆಂದರೆ, ಅವು ಸಂತಾನೋತ್ಪತ್ತಿಯ ಮೂಲಕ ತಮ್ಮ ಸಂಖ್ಯೆ ಹೆಚ್ಚಿಸಿಕೊಳ್ಳುತ್ತಿರುತ್ತವೆ. ಕೆಲವೊಮ್ಮೆ ವನ್ಯ ಪ್ರಾಣಿಗಳನ್ನು ಬೇಟೆಯಾಡಿ ನಿರ್ಮೂಲನೆ ಮಾಡಿದರೆ, ಅವುಗಳ ವಂಶವೇ ಅಳಿದು ಹೋಗಿ, ನವೀಕರಿಸಲಾಗದ ಸಂಪನ್ಮೂಲವಾಗಿ ಬಿಡುತ್ತವೆ. ಇಂತಹ ಸಂಪನ್ಮೂಲವನ್ನು ರಕ್ಷಿಸಬೇಕಾಗಿರುವುದು ನಮ್ಮೆಲ್ಲರ ಹೊಣೆ.

© KTBS NOT TO BE REPUBLISHED

You have learnt about renewable resources. Let us know about some **non-renewable resources**.

ನೀನು ಇದುವರೆಗೂ ನವೀಕರಿಸಬಹುದಾದ ಸಂಪನ್ಮೂಲಗಳ ಬಗ್ಗೆ ತಿಳಿದೆ. ಈಗ ಕೆಲವು **ನವೀಕರಿಸಲಾಗದ ಸಂಪನ್ಮೂಲಗಳ** ಬಗ್ಗೆ ತಿಳಿಯೋಣ.

Fuels

ಇಂಧನಗಳು

Fuels are substances which release heat and energy on burning. We use fuel for many purposes.

ಇಂಧನಗಳು ಉರಿದು ಶಕ್ತಿಯ ಜೊತೆಗೆ ಉಷ್ಣವನ್ನು ಬಿಡುಗಡೆ ಮಾಡುವ ವಸ್ತುಗಳಾಗಿವೆ. ಅನೇಕ ಕೆಲಸಗಳಿಗಾಗಿ ಇವುಗಳನ್ನು ಬಳಸುತ್ತೇವೆ.

Example : running vehicles, cooking food.
ವಾಹನ ಚಲಿಸುವಂತೆ ಮಾಡುವುದು, ಅಡುಗೆ ಮಾಡುವುದು.

- Name three fuels used to run vehicles.
  ವಾಹನಗಳ ಬಳಕೆಗೆ ಬಳಸುವ ಮೂರು ಇಂಧನಗಳನ್ನು ಹೆಸರಿಸು.

  _____ _____ _____

- Name three fuels used to cook food at home.
  ಮನೆಯಲ್ಲಿ ಅಡುಗೆ ಮಾಡಲು ಬಳಸುವ ಮೂರು ಇಂಧನಗಳನ್ನು ಹೆಸರಿಸು.

  _____ _____ _____

Fossil fuels are formed by the remains of extinct plants and animals which were burried under the earth's crust over millions of years, in the absence of the oxygen. The main fossil fuels are petroleum, natural gas and coal.

ಲಕ್ಷಾಂತರ ವರ್ಷಗಳ ಹಿಂದೆ ಭೂಪದರದೊಳಗೆ ಹೂತು ಹೋದ (ಹುದುಗಿದ) ಸತ್ತ ಸಸ್ಯ ಮತ್ತು ಪ್ರಾಣಿಗಳ ದೇಹಗಳು ಆಕ್ಸಿಜನ್ ಇಲ್ಲದೆ ಕೊಳೆತು ಉಂಟಾಗಿರುವುದೇ ಪಳೆಯುಳಿಕೆ ಇಂಧನ. ಇದರಲ್ಲಿ ಪ್ರಮುಖವಾದವು ಎಂದರೆ ಪೆಟ್ರೋಲಿಯಮ್, ನೈಸರ್ಗಿಕ ಅನಿಲ ಮತ್ತು ಕಲ್ಲಿದ್ದಲು.

- **Petroleum :** Petrol, diesel, kerosene, wax etc., are the byproducts of petroleum. Petroleum is a **liquid mineral** formed beneath the earth. It is formed by the action of bacteria, heat and pressure on dead organisms buried under the layers of the rocks.

  ಪೆಟ್ರೋಲಿಯಮ್ : ನಾವು ಬಳಸುವ ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ ಮತ್ತು ಮೇಣ ಇತ್ಯಾದಿಗಳು ಪೆಟ್ರೋಲಿಯಮ್‌ನ ಉಪ ಉತ್ಪನ್ನಗಳಾಗಿವೆ. ಪೆಟ್ರೋಲಿಯಮ್ ಎಂಬುದು ಭೂಮಿಯೊಳಗೆ ರೂಪುಗೊಂಡಿರುವ ಒಂದು **ದ್ರವರೂಪದ ಖನಿಜ**. ಶಿಲಾಪದರಗಳ ಅಡಿಯಲ್ಲಿ ಶೇಖರವಾದ ಸತ್ತ ಜೀವಿಗಳ ದೇಹದ ಮೇಲೆ ಬ್ಯಾಕ್ಟೀರಿಯಾಗಳ ಕ್ರಿಯೆ, ಅಧಿಕ ಉಷ್ಣತೆ ಮತ್ತು ಒತ್ತಡಗಳಿಂದ ಪೆಟ್ರೋಲಿಯಮ್ ರೂಪುಗೊಂಡಿದೆ.

  The byproducts of petroleum like wax and paraffin are used in making candles, wood polish, ointments, dyes, lipsticks, chemical fertilizers, vaseline jelly, etc.,

  ಮೇಣ, ಪ್ಯಾರಾಫಿನ್‌ಗಳಂತಹ ಪೆಟ್ರೋಲಿಯಮ್ ಉಪ ಉತ್ಪನ್ನಗಳನ್ನು ಮೇಣದ ಬತ್ತಿ, ಮರದ ಪಾಲಿಷ್, ಮುಲಾಮು, ಬಣ್ಣ, ಲಿಪ್‌ಸ್ಟಿಕ್, ರಾಸಾಯನಿಕ ಗೊಬ್ಬರ, ವಾಸಲಿನ್ ಜೆಲ್ಲಿ ಇತ್ಯಾದಿಗಳ ತಯಾರಿಕೆಯಲ್ಲಿಯೂ ಬಳಸುತ್ತಾರೆ.

NOT TO BE REPUBLISHED © KTBS

- **Natural gas :** Natural gas is found with petroleum in petroleum wells. Compressed natural gas is used as an alternative fuel for petrol and diesel to run vehicles.

  ನೈಸರ್ಗಿಕ ಅನಿಲ : ನೈಸರ್ಗಿಕ ಅನಿಲವು ಪೆಟ್ರೋಲಿಯಮ್ ಬಾವಿಗಳಲ್ಲಿ ಪೆಟ್ರೋಲಿಯಮ್‌ನೊಂದಿಗೆ ದೊರೆಯುತ್ತದೆ. ಒತ್ತಡಕ್ಕೆ ಒಳಪಡಿಸಿದ ನೈಸರ್ಗಿಕ ಅನಿಲ (ಸಂಪೀಡಿತ ನೈಸರ್ಗಿಕ ಅನಿಲ)ವನ್ನು ಪೆಟ್ರೋಲ್ ಮತ್ತು ಡೀಸೆಲ್‌ಗಳ ಬದಲೀ ಇಂಧನವಾಗಿ ವಾಹನಗಳಿಗೆ ಬಳಸಲಾಗುತ್ತದೆ.



Know this : You have seen the use of cooking gas at home. This is called Liquified Petroleum Gas - LPG. It is obtained by refining petroleum or moist natural gas.



ಮನೆಯಲ್ಲಿ ಅಡುಗೆ ಅನಿಲ ಬಳಸುವುದನ್ನು ನೀನು ನೋಡಿರಬಹುದು. ಇದನ್ನು ದ್ರವೀಕರಿಸಿದ **ನೈಸರ್ಗಿಕ ಅನಿಲ** (Liquified Petroleum Gas - LPG) ಎಂದು ಕರೆಯುತ್ತಾರೆ. ಪೆಟ್ರೋಲಿಯಮ್ ಅಥವಾ ತೇವದ ನೈಸರ್ಗಿಕ ಅನಿಲವನ್ನು ಸಂಸ್ಕರಿಸಿ ಇದನ್ನು ಪಡೆಯಲಾಗುತ್ತದೆ.

©KTBS NOT TO BE REPUBLISHED

- **Coal :** Millions of years ago,the remains of plants and trees that were buried beneath the earth's crust did not decay completely. Due to the high temperature and pressure, they turned into coal under the layers of the rocks. This is used as fuel in the production of electricity. This source of energy is also used in industries.

  ಕಲ್ಲಿದ್ದಲು : ಲಕ್ಷಾಂತರ ವರ್ಷಗಳ ಹಿಂದೆ ಭೂಮಿಯಲ್ಲಿ ಹೂತು ಹೋದ ಮರ ಗಿಡಗಳ ಅವಶೇಷಗಳು ಪೂರ್ಣವಾಗಿ ಕೊಳೆಯದೆ ಶಿಲಾ ಪದರಗಳ ಕೆಳಗೆ ಒತ್ತಡ ಮತ್ತು ಉಷ್ಣಕ್ಕೆ ಸಿಲುಕಿ ಕಲ್ಲಿದ್ದಲು ರೂಪಕ್ಕೆ ಪರಿವರ್ತಿತವಾಗಿವೆ. ವಿದ್ಯುತ್ ಉತ್ಪಾದಿಸಲು ಇದನ್ನು ಇಂಧನವಾಗಿ ಬಳಸುತ್ತಾರೆ. ಶಕ್ತಿಯ ಮೂಲವಾದ ಇದನ್ನು ಕೈಗಾರಿಕೆಗಳಲ್ಲೂ ಬಳಸುತ್ತಾರೆ.

Write examples for the following.
ಇವುಗಳಿಗೆ ಉದಾಹರಣೆಯನ್ನು ಬರೆ.

Solid fuel
ಘನ ಇಂಧನ : _____

Liquid fuel
ದ್ರವ ಇಂಧನ : _____


Gaseous fuel
ಅನಿಲ ಇಂಧನ : _____

Write measures that can be taken to conserve the following fuels here.

ಈ ಇಂಧನಗಳನ್ನು ಉಳಿಸಲು ಯಾವ ಕ್ರಮಗಳನ್ನು ಅನುಸರಿಸಬಹುದು ಎಂಬುದನ್ನು ಬರೆ.

Cooking gas ಅಡುಗೆ ಅನಿಲ	**Diesel/Petrol** ಡೀಸಲ್/ ಪೆಟ್ರೋಲ್

@KTBS NOT TO BE REPUBLISHED



Know this : Excessive use of fuels is dangerous to the environment. Now-a-days efforts are being made to use alternative sources of energy like solar energy.

ಇಂಧನಗಳ ಅತಿಯಾದ ಬಳಕೆ ಪರಿಸರಕ್ಕೆ ಹಾನಿಕರ. ಆದ್ದರಿಂದ ಇತ್ತೀಚಿನ ದಿನಗಳಲ್ಲಿ ಸೌರಶಕ್ತಿಯಂತಹ ಶಕ್ತಿ ಮೂಲಗಳನ್ನು ಪಳೆಯುಳಿಕೆ ಇಂಧನಗಳಿಗೆ ಪರ್ಯಾಯವಾಗಿ ಬಳಕೆ ಮಾಡುವ ಪ್ರಯತ್ನಗಳು ಹೆಚ್ಚಾಗುತ್ತಿವೆ.

Mineral resources

ಖನಿಜ ಸಂಪನ್ಮೂಲಗಳು

Minerals are formed in the earth as a result of prolonged natural process. They are available along with rocks. Minerals are extracted in the form of ore, refined in factories and metals are separated from them.

ಖನಿಜಗಳು ನೈಸರ್ಗಿಕ ಪ್ರಕ್ರಿಯೆಗಳಿಂದ ದೀರ್ಘಾವಧಿಯಲ್ಲಿ ಭೂಮಿಯಲ್ಲಿ ರೂಪುಗೊಳ್ಳುತ್ತವೆ. ಅವು ಶಿಲೆಗಳಲ್ಲಿ ದೊರೆಯುತ್ತವೆ. ಅದಿರಿನ ರೂಪದಲ್ಲಿ ಹೊರತೆಗೆದ ಖನಿಜಗಳನ್ನು ಕಾರ್ಖಾನೆಗಳಲ್ಲಿ ಶುದ್ಧೀಕರಿಸಿ, ಲೋಹಗಳನ್ನು ಬೇರ್ಪಡಿಸಲಾಗುತ್ತದೆ.

Example : Separation of iron from iron ore.

ಕಬ್ಬಿಣದ ಅದಿರಿನಿಂದ ಕಬ್ಬಿಣವನ್ನು ಪಡೆಯುವುದು.

Metals like aluminium, copper, silver etc., are extracted from their ores.

ಅಲ್ಯುಮಿನಿಯಮ್, ತಾಮ್ರ, ಬೆಳ್ಳಿ ಇತ್ಯಾದಿಗಳು ಖನಿಜಗಳಿಂದಲೇ ದೊರೆಯುತ್ತವೆ.

Word help

Mineral : It is a multi useful material available in nature. Its composition can be represented by the chemical formula.

ಖನಿಜ : ಇದು ನಿಸರ್ಗದಲ್ಲಿ ದೊರೆಯುವ, ಬಹುಪಯೋಗಿ ವಸ್ತುವಾಗಿದ್ದು ರಾಸಾಯನಿಕ ಸೂತ್ರದಿಂದ ಹೇಳಬಹುದಾದ ಸಂಯೋಜನೆಯನ್ನು ಹೊಂದಿರುತ್ತದೆ.


@KSEEBS NOT TO BE REPUBLISHED

■ **Look at the following pictures and write the uses of minerals.**

ಚಿತ್ರಗಳನ್ನು ನೋಡಿ ಖನಿಜಗಳ ಉಪಯೋಗ ತಿಳಿಸು.








Think : What would have happened if there were no minerals?

ಖನಿಜಗಳು ಇಲ್ಲದೆ ಇದ್ದಿದ್ದರೆ ಏನಾಗುತ್ತಿತ್ತು ?

©KTBS NOT TO BE REPUBLISHED

Explain in your class about the minerals used at your home.

ನಿಮ್ಮ ಮನೆಯಲ್ಲಿ ಯಾವ ಯಾವ ಖನಿಜದ ಉತ್ಪನ್ನಗಳನ್ನು ಬಳಸುವಿರಿ ಎಂಬುದನ್ನು ತರಗತಿಯಲ್ಲಿ ವಿವರಿಸು.



Know this : Regaining of emptied mineral resources depends on the scientific process, that takes place inside the earth. Minerals are formed over millions of years. Hence they must be used moderately.

ಖನಿಜಗಳು ನೈಸರ್ಗಿಕವಾಗಿ ಮತ್ತೆ ಭರ್ತಿಯಾಗಲು ಭೂಮಿಯ ಒಳಗೆ ನಡೆಯುವ ವೈಜ್ಞಾನಿಕ ಪ್ರಕ್ರಿಯೆಗಳನ್ನು ಅವಲಂಬಿಸಿವೆ. ಲಕ್ಷಾಂತರ ವರ್ಷಗಳ ದೀರ್ಘಾವಧಿಯಲ್ಲಿ ಖನಿಜಗಳು ರೂಪುಗೊಳ್ಳುತ್ತವೆ. ಆದ್ದರಿಂದ ಇವುಗಳನ್ನು ಮಿತವಾಗಿ ಬಳಸಬೇಕು.

- Write the uses of the natural resources given in the table

  ಪಟ್ಟಿಯಲ್ಲಿ ಕೊಟ್ಟಿರುವ ನೈಸರ್ಗಿಕ ಸಂಪನ್ಮೂಲಗಳ ಉಪಯೋಗಗಳನ್ನು ಬರೆ.

Natural resources **ನೈಸರ್ಗಿಕ ಸಂಪನ್ಮೂಲಗಳು**	**Uses** **ಉಪಯೋಗಗಳು**
soil ಮಣ್ಣು	
forests ಕಾಡುಗಳು	
solar energy ಸೌರಶಕ್ತಿ	
animals ಪ್ರಾಣಿಗಳು	
fossil fuels ಪಳೆಯುಳಿಕೆ ಇಂಧನಗಳು	
minerals ಖನಿಜಗಳು	

@KTBS NOT TO BE REPUBLISHED

- List out the materials used in the construction of your house. Identify by marking (✓) to the natural resources in that list. What have you learnt from this activity?

  ನಿನ್ನ ಮನೆಯನ್ನು ಕಟ್ಟಲು ಬಳಸಿರುವ ವಸ್ತುಗಳನ್ನು ಪಟ್ಟಿಮಾಡು. ಆ ಪಟ್ಟಿಯಲ್ಲಿರುವ ನೈಸರ್ಗಿಕ ಸಂಪನ್ಮೂಲಗಳನ್ನು (✓) ಚಿಹ್ನೆಯ ಮೂಲಕ ಗುರುತಿಸು. ಇದರಿಂದ ನೀನೇನು ತಿಳಿದೆ?

  _____

  _____

  _____

  _____

  _____

  _____

  _____

  _____

- The availability of natural resources that fulfill our needs is not uniform everywhere. The quality of available resources is also not the same. As a result of excessive usage (more than our requirements) there is scarcity of such natural resources. If the same condition persists, some of the resources may not be available in the future. Hence these resources must be used moderately and they must be reused to conserve it, if possible.

  ನಮ್ಮ ಅಗತ್ಯಗಳ ಪೂರೈಕೆಗೆ ಅವಶ್ಯಕವಾಗಿರುವ ಈ ಸಂಪನ್ಮೂಲಗಳು ಎಲ್ಲಾ ಪ್ರದೇಶಗಳಲ್ಲೂ ಒಂದೇ ಸಮನಾಗಿ ಲಭ್ಯವಿರುವುದಿಲ್ಲ. ಲಭ್ಯವಿರುವ ಸಂಪನ್ಮೂಲಗಳ ಗುಣಮಟ್ಟದಲ್ಲಿಯೂ ಕೂಡ ವ್ಯತ್ಯಾಸವಿರುತ್ತದೆ. ನಮ್ಮ ಅಗತ್ಯಗಳಿಗಿಂತ ಹೆಚ್ಚಾಗಿ ಈ

@KTBS NOT TO BE REPUBLISHED

ಸಂಪನ್ಮೂಲಗಳನ್ನು ಅತಿಯಾಗಿ ಬಳಕೆ ಮಾಡುತ್ತಿರುವುದರಿಂದ ಇತ್ತೀಚೆಗೆ ಇವುಗಳ ಅಭಾವ (ಕೊರತೆ) ಕಂಡು ಬರುತ್ತಿದೆ. ಇವುಗಳ ಬಳಕೆ ಹೀಗೆಯೇ ಮುಂದುವರೆದರೆ ಮುಂದೊಂದು ದಿನ ಕೆಲವು ಸಂಪನ್ಮೂಲಗಳು ಸಿಗದೇ ಇರಬಹುದು. ಆದ್ದರಿಂದ ಇವುಗಳನ್ನು ಮಿತವಾಗಿ ಬಳಸಬೇಕು ಮತ್ತು ಅವಕಾಶವಿದ್ದಲ್ಲಿ ಪುನರ್ ಬಳಕೆ ಮಾಡುವುದರ ಮೂಲಕ ಉಳಿಸಿಕೊಳ್ಳಬೇಕು.



Know this

- Natural resources are there to fulfill our needs but not to fulfill our greed.

  ನೈಸರ್ಗಿಕ ಸಂಪನ್ಮೂಲಗಳು ನಮ್ಮ ಅಗತ್ಯಗಳಿಗಾಗಿಯೇ ಹೊರತು ದುರಾಸೆಗಳನ್ನು ಪೂರೈಸಲು ಅಲ್ಲ.

- Natural resources should be used moderately and the balance in nature should be maintained.

  ನೈಸರ್ಗಿಕ ಸಂಪನ್ಮೂಲಗಳನ್ನು ಮಿತವಾಗಿ ಬಳಸಿ, ಪರಿಸರದ ಸಮತೋಲನವನ್ನು ಕಾಪಾಡಬೇಕು.

Do you know this?

- In earlier days, natural things like mountains, forests, minerals, animals, soil, water etc., were considered as natural resources. Now a days it has got a wider meaning. The meaning of the word resource is changing with time.

  ಹಿಂದೆ ಪರ್ವತ, ಕಾಡು, ಖನಿಜ ನಿಕ್ಷೇಪ, ಪ್ರಾಣಿ, ಮಣ್ಣು, ನೀರು ಇತ್ಯಾದಿ ನೈಸರ್ಗಿಕ ಅಂಶಗಳನ್ನು ಸಂಪನ್ಮೂಲಗಳೆಂದು ಪರಿಗಣಿಸಲಾಗುತ್ತಿತ್ತು. ಈಗ ಅದು ಬದಲಾಗಿ ಹೆಚ್ಚು ವ್ಯಾಪಕ ಅರ್ಥವನ್ನು ಹೊಂದಿದೆ. ಸಂಪನ್ಮೂಲ ಎಂಬ ಪದದ ಅರ್ಥವು ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದಿದೆ.

NOT TO BE REPUBLISHED ©KTBS

- A thing once considered as a resource, may not be considered as a resource after some years.

  ಒಂದು ವಸ್ತುವನ್ನು ಒಂದು ಕಾಲದಲ್ಲಿ ಸಂಪನ್ಮೂಲವೆಂದು ಪರಿಗಣಿಸಿರುವುದು, ಮತ್ತೊಂದು ಕಾಲದಲ್ಲಿ ಹಾಗೆ ಪರಿಗಣಿಸಲಾಗುವುದಿಲ್ಲ.

  Example : Natural gas is a resource now, but it was not so about a thousand years ago.

  ಉದಾಹರಣೆ: ನೈಸರ್ಗಿಕ ಅನಿಲ ಈಗ ಸಂಪನ್ಮೂಲ. ಒಂದು ಸಾವಿರ ವರ್ಷಗಳ ಹಿಂದೆ ಅದು ಜನರಿಗೆ ಸಂಪನ್ಮೂಲವಾಗಿರಲಿಲ್ಲ.

- Sun light, water, soil available everywhere on the earth are called universal resources.

  ಎಲ್ಲಾ ಕಡೆಗೂ ದೊರೆಯುವ ಸಂಪನ್ಮೂಲವಾದ ಸೂರ್ಯನ ಬೆಳಕು, ನೀರು, ಮಣ್ಣನ್ನು ಸರ್ವವ್ಯಾಪಿ ಸಂಪನ್ಮೂಲವೆನ್ನುತ್ತಾರೆ.

- If forest resource is used for fire wood and wooden logs, then it cannot be reused again. As a result, forests become non-renewable resources. Growing more trees and moderate use of wood can make the forests renewable.

  ಕಾಡು ಸಂಪನ್ಮೂಲಗಳನ್ನು ಉರುವಲು ಅಥವಾ ಮರಮುಟ್ಟುಗಳಿಗೆ ಉಪಯೋಗಿಸಿದರೆ ಪುನಃ ಉಪಯೋಗಿಸಲು ಸಾಧ್ಯವಿಲ್ಲ. ಆಗ ಕಾಡುಗಳು ನವೀಕರಿಸಲಾಗದ ಸಂಪನ್ಮೂಲಗಳಾಗುತ್ತದೆ. ಮರಗಳನ್ನು ಪುನಃ ಪುನಃ ಬೆಳೆಸುವುದು, ಮಿತವಾಗಿ ಬಳಸುವುದರ ಮೂಲಕ ನವೀಕರಿಸಬಹುದಾದ ಸಂಪನ್ಮೂಲಗಳಾಗಿ ಪರಿವರ್ತಿಸಬಹುದು.

©KTBS NOT TO BE REPUBLISHED

- Now-a-days, sea water can be converted into pure water for drinking purpose by using some methods. But these methods are very expensive.

  ಸಮುದ್ರದ ಉಪ್ಪು ನೀರನ್ನು ಕುಡಿಯಲು ಯೋಗ್ಯಮಾಡುವ ವಿಧಾನಗಳು ಈಗ ಬಳಕೆಯಲ್ಲಿವೆ. ಆದರೆ ಅದು ದುಬಾರಿ ವೆಚ್ಚದ್ದಾಗಿದೆ.

- Human beings with innate intelligence, creativity, expertise and aesthetic sense can also be considered as a type of resource.

  ಮಾನವನಲ್ಲಿ ಹುದುಗಿದ ಬುದ್ಧಿಶಕ್ತಿ, ಕ್ರಿಯಾಶೀಲ ಮನಸ್ಸು, ಪರಿಣತಿ, ಸೌಂದರ್ಯ ಪ್ರಜ್ಞೆ ಮೊದಲಾದ ಅನೇಕ ಸಾಮರ್ಥ್ಯಗಳು ಇರುವುದರಿಂದ ಆತನು ಸಹ ಒಂದು ರೀತಿಯ ಸಂಪನ್ಮೂಲ ಎನ್ನಬಹುದು.

@KTBS
NOT TO BE REPUBLISHED

LESSON - 6

AIR

V8L2E3

Air is one of the natural resources. The earth is surrounded by layers of air called **atmosphere.** Air being a mixture of many gases is very essential for sustaining the life of animals and plants.

ನೈಸರ್ಗಿಕ ಸಂಪನ್ಮೂಲಗಳಲ್ಲಿ ವಾಯುವೂ ಒಂದು. ಇದು ಭೂಗೋಳದ ಸುತ್ತಲು ಒಂದು ಕವಚವಾಗಿ ಹರಡಿದೆ. ಇದನ್ನು **ವಾಯುಗೋಳ** ಎಂದೂ ಕರೆಯುತ್ತಾರೆ. ಅನೇಕ ಅನಿಲಗಳ ಮಿಶ್ರಣವಾಗಿರುವ ವಾಯುವು ಸಸ್ಯ ಮತ್ತು ಪ್ರಾಣಿಗಳ ಉಳಿವಿಗೆ ತುಂಬಾ ಅವಶ್ಯವಾಗಿವೆ.

After studying this lesson you,

- know about the existence of air through experiments.
  ವಾಯುವಿನ ಅಸ್ತಿತ್ವದ ಬಗ್ಗೆ ಪ್ರಯೋಗಗಳಿಂದ ತಿಳಿಯುವೆ.
- know the components of air.
  ವಾಯುವಿನ ಘಟಕಗಳನ್ನು ತಿಳಿಯುವೆ.
- understand some characteristics of air through experiments.
  ವಾಯುವಿನ ಕೆಲವು ಲಕ್ಷಣಗಳನ್ನು ಪ್ರಯೋಗಗಳಿಂದ ತಿಳಿಯುವೆ.
- understand the uses of air.
  ವಾಯುವಿನ ಉಪಯೋಗಗಳನ್ನು ಅರಿಯುವೆ.
- discuss about air pollution, causes and effects and remedies.
  ವಾಯು ಮಾಲಿನ್ಯದ ಅರ್ಥ, ಕಾರಣ, ಪರಿಣಾಮ ಮತ್ತು ಪರಿಹಾರಗಳನ್ನು ಚರ್ಚಿಸುವೆ.

©KTBS NOT TO BE REPUBLISHED

- Air is not visible, but its presence can be felt. How do you know that air is in your surroundings? Write 3 experiences about it.

  ವಾಯು ಕಣ್ಣಿಗೆ ಕಾಣುವುದಿಲ್ಲ. ಆದರೆ ಇದರ ಇರುವಿಕೆಯ ಅನುಭವ ಆಗುತ್ತದೆ. ನಮ್ಮ ಸುತ್ತಲೂ ವಾಯು ಇದೆ ಎಂದು ನಿನಗೆ ಹೇಗೆ ತಿಳಿಯಿತು? ಈ ಬಗ್ಗೆ 3 ಅನುಭವಗಳನ್ನು ಬರೆ.

_____

_____

_____

_____




Know this : We use oxygen in air for respiration. We cannot live without respiration. In the same way animals and plants also need oxygen for respiration. Oxygen is necessary for fuels to burn. Apart from this, there are many more uses of air. You will learn about these in the next classes.

ನಾವು ಉಸಿರಾಡಲು ವಾಯುವಿನಲ್ಲಿರುವ ಆಕ್ಸಿಜನ್ ಅನಿಲವನ್ನು ಬಳಸುತ್ತೇವೆ. ಉಸಿರಾಡದೆ ನಾವು ಬದುಕಲು ಸಾಧ್ಯವಿಲ್ಲ. ನಮ್ಮಂತೆಯೇ ಪ್ರಾಣಿಗಳು ಮತ್ತು ಸಸ್ಯಗಳ ಉಸಿರಾಟಕ್ಕೂ ಆಕ್ಸಿಜನ್ ಬೇಕು. ಇಂಧನ ದ್ರವ್ಯಗಳನ್ನು ಉರಿಸಲು ಆಕ್ಸಿಜನ್ ಅತ್ಯವಶ್ಯ. ಇದಲ್ಲದೆ ವಾಯುವಿನಿಂದ ನಮಗೆ ಅನೇಕ ಉಪಯೋಗಗಳಿವೆ. ಈ ಬಗ್ಗೆ ಮುಂದಿನ ತರಗತಿಯಲ್ಲಿ ಕಲಿಯುವೆ.

Air is a mixture of nitrogen (78%), oxygen (21%), carbon dioxide (0.04%), water vapour, noble gases and dust particles. (0.96%).

ವಾಯುವು ನೈಟ್ರೊಜನ್(78%), ಆಕ್ಸಿಜನ್ (21%), ಕಾರ್ಬನ್ ಡೈ ಆಕ್ಸೈಡ್ (0.04%), ನೀರಾವಿ, ಜಡ ಅನಿಲಗಳು ಮತ್ತು ಧೂಳಿನ (0.96%) ಮಿಶ್ರಣದಿಂದಾಗಿದೆ.

© KTBS NOT TO BE REPUBLISHED



Study the composition of air shown in the picture and answer the following questions.

ಈ ಚಿತ್ರದಲ್ಲಿ ತೋರಿಸಿರುವ ವಾಯುವಿನ ಸಂಯೋಜನೆಯನ್ನು ನೋಡಿ, ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.

1. Which gas is the major component of air?
   ವಾಯುವಿನಲ್ಲಿ ಅತ್ಯಂತ ಹೆಚ್ಚಾಗಿರುವ ಅನಿಲ ಯಾವುದು?

   _____

2. What percentage of gas required for our respiration is present in the air?
   ವಾಯುವಿನಲ್ಲಿ ನಮ್ಮ ಉಸಿರಾಟಕ್ಕೆ ಅಗತ್ಯವಾದ ಅನಿಲ ಎಷ್ಟು ಪ್ರಮಾಣದಲ್ಲಿದೆ?

   _____

3. What is the normal percentage of carbon dioxide in air?
   ಸಾಮಾನ್ಯವಾಗಿ ವಾಯುವಿನಲ್ಲಿ ಕಾರ್ಬನ್ ಡೈಆಕ್ಸೈಡ್ ಪ್ರಮಾಣ ಎಷ್ಟಿರುತ್ತದೆ?

   _____


4. Which is the least component present in air?
   ವಾಯುವಿನಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿರುವ ಘಟಕ ಯಾವುದು?

   _____

© KTBS NOT TO BE REPUBLISHED

Do this : Press a piece of dry paper to the inner bottom of a glass tumbler. Invert the glass and press it in a trough filled with water. Take care while pressing the glass in the water.

ಒಂದು ಗಾಜಿನ ಲೋಟದ ತಳಕ್ಕೆ ಒಣಗಿದ ಪೇಪರ್ ತುಂಡೊಂದನ್ನು ಒತ್ತಿರಿ. ಲೋಟವನ್ನು ತಲೆ ಕೆಳಗೆ ಮಾಡಿ, ಇದನ್ನು ನೀರು ತುಂಬಿರುವ ಗಾಜಿನ ತೊಟ್ಟಿಗೆ ಅದುಮಿರಿ. ಲೋಟವನ್ನು ನೀರಿನಲ್ಲಿ ಅದುಮುವಾಗ ಎಚ್ಚರವಹಿಸಿ.



Observe what happens. Is there water inside the glass? Does the piece of paper in the tumbler get wet? No. Why is it so?

ಏನಾಗುವುದು ಗಮನಿಸಿ. ನೀರು ಲೋಟದೊಳಕ್ಕೆ ಹೋಗಿದೆಯೆ? ಲೋಟದೊಳಗಿನ ಪೇಪರ್ ನೀರಿನಿಂದ ತೇವಗೊಂಡಿದೆಯೆ? ಇಲ್ಲ. ಏಕೆ ಹೀಗೆ?

Now tilt the glass slightly. What do you observe? Air bubbles come out of the tumbler and water goes inside. How does this happen?

ಈಗ ಲೋಟವನ್ನು ಸ್ವಲ್ಪ ಓರೆಯಾಗಿಸಿ. ನೀವು ಏನನ್ನು ಗಮನಿಸುವಿರಿ? ವಾಯುವಿನ ಗುಳ್ಳೆಗಳು ಲೋಟದಿಂದ ಹೊರಬರುತ್ತವೆ ಮತ್ತು ನೀರು ಲೋಟದೊಳಗೆ ಹೋಗುತ್ತದೆ. ಇದು ಹೇಗಾಯಿತು?

An empty tumbler is not really empty. It is filled with air. When it is pressed inversely in the trough filled with water, air comes out and water goes into the tumbler. What do you understand by this activity?

ಖಾಲಿ ಲೋಟವು ನಿಜವಾಗಿಯೂ ಖಾಲಿಯಿರುವುದಿಲ್ಲ. ಲೋಟವು ವಾಯುವಿನಿಂದ ತುಂಬಿರುತ್ತದೆ. ನೀರಿನ ತೊಟ್ಟಿಗೆ ಗಾಜಿನ ಲೋಟವನ್ನು ಮುಳುಗಿಸಲು ಒತ್ತಿದಾಗ ಲೋಟದೊಳಗಿನ ವಾಯು ಹೊರಬಂದು ನೀರು ಒಳಸೇರುತ್ತದೆ. ಈ ಚಟುವಟಿಕೆಯಿಂದ ನಿನಗೆ ಏನು ತಿಳಿಯುತ್ತದೆ?

© KTBS NOT TO BE REPUBLISHED



Think : What happens when the tyre of a vehicle gets punctured?

ವಾಹನದ ಟೈರ್ ಪಂಕ್ಚರ್ ಆದಾಗ ಏನಾಗುತ್ತದೆ?



What is being done here to inflame fire in the oven? What do you learn from this? Write here.

ಇಲ್ಲಿ ಒಲೆಯು ಉರಿಯಲು ಏನು ಮಾಡುತ್ತಿದ್ದಾರೆ? ಇದರಿಂದ ನೀನೇನು ತಿಳಿದೆ? ಇಲ್ಲಿ ಬರೆ.




_____

_____

■ Match by drawing lines

ಗೆರೆ ಎಳೆದು ಹೊಂದಿಸು.

	Air helps things burn ವಸ್ತುಗಳು ಉರಿಯಲು ವಾಯು ಸಹಾಯ ಮಾಡುತ್ತದೆ.
	Air occupies space ವಾಯು ಸ್ಥಳವನ್ನು ಆಕ್ರಮಿಸುತ್ತದೆ.

@KTBS NOT TO BE REPUBLISHED



Air has weight
ವಾಯುವಿಗೆ ತೂಕವಿದೆ.

You will know more about the use of wind energy in the unit **amazing energy.**

ವಾಯು ಶಕ್ತಿಯ ಉಪಯೋಗಗಳ ಬಗ್ಗೆ ಹೆಚ್ಚಿನ ವಿವರವನ್ನು **ವಿಸ್ಮಯ ಶಕ್ತಿ** ಪಾಠದಲ್ಲಿ ತಿಳಿಯುವೆ.

Moving air is called wind. Wind has enormous energy.
ವಾಯು ಚಲಿಸಲು ಪ್ರಾರಂಭವಾದಾಗ ಅದನ್ನು **ಗಾಳಿ** ಎಂದು ಕರೆಯುತ್ತೇವೆ. ಚಲಿಸುವ ಗಾಳಿಗೆ ಅಪಾರವಾದ ಶಕ್ತಿಯಿದೆ.

What do you learn from these incidents?
ಈ ಘಟನೆಗಳಿಂದ ನೀನೇನು ತಿಳಿದೆ.

- Roofs of houses are carried away by strong winds.
  ಜೋರಾಗಿ ಬೀಸಿದ ಗಾಳಿಯಿಂದ ಮನೆಯ ಛಾವಣಿಗಳು ಹಾರಿ ಹೋಗಿವೆ.
- While walking on a street, sometimes we feel the wind pushing us.
  ರಸ್ತೆಯಲ್ಲಿ ನಾವು ನಡೆಯುವಾಗ ಗಾಳಿ ಜೋರಾಗಿ ಬೀಸಿದಾಗ ಹಿಂದಕ್ಕೆ ತಳ್ಳಿದಂತೆ ಅನುಭವವಾಗುತ್ತದೆ.
- Clothes hung out to dry will flutter when the wind blows.
  ಒಣಗಲು ಹಾಕಿದ ಬಟ್ಟೆಗಳು ಗಾಳಿ ಬೀಸುವಾಗ ಹಿಂದಕ್ಕೆ ಮುಂದಕ್ಕೆ ಹಾರುತ್ತವೆ.
- A vehicle cannot move if the air inside the tyre comes out.
  ಚಕ್ರದೊಳಗಿನ ಟ್ಯೂಬ್‌ನಲ್ಲಿರುವ ಗಾಳಿ ಹೊರಗೆ ಹೋದರೆ ವಾಹನ ಮುಂದಕ್ಕೆ ಚಲಿಸುವುದಿಲ್ಲ.

NOT TO BE REPUBLISHED @KTBS

- Coconut trees swing in strong winds.
  ಗಾಳಿಯ ರಭಸಕ್ಕೆ ತೆಂಗಿನ ಮರಗಳು ತೂಗುತ್ತವೆ.
- Kites fly up in the sky.
  ಗಾಳಿಪಟ ಮೇಲಕ್ಕೆ ಹಾರುತ್ತದೆ.

Air is polluted by the smoke released by factories, automobiles, burning of substances and crackers.

ಕೈಗಾರಿಕೆಗಳ ಹೊಗೆ, ವಾಹನಗಳ ಹೊಗೆ, ವಸ್ತುಗಳನ್ನು ಮತ್ತು ಪಟಾಕಿಗಳನ್ನು ಸುಡುವುದರಿಂದ ವಾಯುವು ಮಾಲಿನ್ಯಗೊಳ್ಳುತ್ತದೆ.








© KTBS NOT TO BE REPUBLISHED

Mixing chemicals, dust, micro organisms which are harmful to man and other organisms into air is called **air pollution.** Air gets polluted when chemicals and micro particles of smoke from industries and vechicles mix up with it. It causes serious health issues like heart disease, cancer, breathing problems etc., It has a negative impact on growth of plants and their yield. Some animal races may get extinct. Since all organisms need air, it is necessary to prevent air pollution. So we must take measures to stop air pollution.

ಮನುಷ್ಯರಿಗೆ ಅಥವಾ ಇತರ ಜೀವಿಗಳಿಗೆ ಹಾನಿ ಉಂಟು ಮಾಡುವ ರಾಸಾಯನಿಕಗಳು, ಧೂಳು, ಸೂಕ್ಷ್ಮ ಜೀವಿಗಳು ವಾಯುವನ್ನು ಸೇರುವುದೇ **ವಾಯು ಮಾಲಿನ್ಯ.** ಕಾರ್ಖಾನೆಗಳ ಹೊಗೆ, ವಾಹನಗಳ ಹೊಗೆ ಇತ್ಯಾದಿಗಳಿಂದ ರಾಸಾಯನಿಕಗಳು ಹಾಗೂ ಅತೀ ಸೂಕ್ಷ್ಮ ಕಣಗಳು ವಾಯುವನ್ನು ಸೇರುವುದರಿಂದ ವಾಯು ಮಾಲಿನ್ಯ ಉಂಟಾಗುತ್ತದೆ. ಇದರಿಂದ ಹೃದ್ರೋಗ (ಹೃದಯ ಸಂಬಂಧಿ ರೋಗ), ಕ್ಯಾನ್ಸರ್, ಶ್ವಾಸಕೋಶ ಮತ್ತು ಉಸಿರಾಟದ ತೊಂದರೆಯಂತಹ ಗಂಭೀರ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ. ಸಸ್ಯಗಳ ಬೆಳವಣಿಗೆ ಮತ್ತು ಸಸ್ಯಗಳಿಂದ ದೊರೆಯುವ ಉತ್ಪನ್ನಗಳ (ಇಳುವರಿ) ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಇದರಿಂದ ಕೆಲವು ಪ್ರಾಣಿಗಳ ಸಂತತಿಯೇ ಕಣ್ಮರೆಯಾಗಬಹುದು. ವಾಯು ಸಂಪನ್ಮೂಲವು ಎಲ್ಲಾ ಜೀವಿಗಳಿಗೆ ಬಹಳ ಅಗತ್ಯವಾಗಿದ್ದು, ಇದು ಮಾಲಿನ್ಯವಾಗದಂತೆ ನೋಡಿಕೊಳ್ಳುವುದು ಅವಶ್ಯಕವಾಗಿದೆ. ಆದ್ದರಿಂದ ನಾವು ವಾಯುಮಾಲಿನ್ಯವನ್ನು ತಡೆಗಟ್ಟುವ ಕ್ರಮಗಳನ್ನು ಅನುಸರಿಸಬೇಕು.

- Write any two measures to prevent air pollution.
  (Take the help of your teacher/elders)

  ವಾಯು ಮಾಲಿನ್ಯವನ್ನು ತಡೆಗಟ್ಟಲು ಅನುಸರಿಸಬಹುದಾದ ಎರಡು ಕ್ರಮಗಳನ್ನು ಬರೆ.
  (ಶಿಕ್ಷಕರು / ಹಿರಿಯರ ಸಹಾಯವನ್ನು ಪಡೆ)

  _____

  _____

© KTBS NOT TO BE REPUBLISHED



Know this : Some of the measures to be followed to prevent air pollution are as follows.

ವಾಯು ಮಾಲಿನ್ಯವನ್ನು ತಡೆಗಟ್ಟಲು ಅನುಸರಿಸಬಹುದಾದ ಕೆಲವು ಕ್ರಮಗಳು ಹೀಗಿವೆ.

- Preventing the mixing up of chemical wastes discharged by factories, with air.

  ಕೈಗಾರಿಕೆಗಳು ಹೊರಸೂಸುವ ರಾಸಾಯನಿಕ ಅನುಪಯುಕ್ತ ತ್ಯಾಜ್ಯಗಳು ವಾಯುವನ್ನು ಸೇರದಂತೆ ತಡೆಯುವುದು.

- Installing tall chimneys in factories so that the smoke can be released at a higher altitude.

  ಹೊಗೆಯನ್ನು ವಾತಾವರಣದಿಂದ ಎತ್ತರಕ್ಕೆ ಕೊಂಡೊಯ್ದು ಬಿಡುಗಡೆ ಮಾಡುವಂತೆ ಎತ್ತರವಾದ ಹೊಗೆ ಕೊಳವೆಗಳನ್ನು ಕಟ್ಟುವುದು.

- Using gaseous fuel instead of coal, diesel and petrol.

  ಕಲ್ಲಿದ್ದಲು, ಡೀಸೆಲ್, ಪೆಟ್ರೋಲ್ ಇಂಧನಕ್ಕೆ ಬದಲಾಗಿ ಅನಿಲ (ಗ್ಯಾಸ್) ಇಂಧನವನ್ನು ಬಳಸುವುದು.

- Designing emission control systems.

  ಹೊಗೆ ನಿಯಂತ್ರಣ ವ್ಯವಸ್ಥೆ ಇರುವಂತೆ ವಿನ್ಯಾಸಗೊಳಿಸುವುದು.

- Using public transport.

  ಸಾರ್ವಜನಿಕ ವಾಹನಗಳನ್ನು ಬಳಸುವುದು.

- Using alternative energy sources like solar energy, hydro electric power and wind power.

  ಬದಲಿ ಇಂಧನ ಮೂಲಗಳಾದ ಸೌರಶಕ್ತಿ, ಜಲವಿದ್ಯುತ್ ಶಕ್ತಿ ಮತ್ತು ಪವನಶಕ್ತಿಯನ್ನು ಉಪಯೋಗಿಸುವುದು.

- Avoiding burning of substances near civilian areas.

  ಜನವಸತಿ ಪ್ರದೇಶಗಳಲ್ಲಿ ವಸ್ತುಗಳನ್ನು ಸುಡದಿರುವುದು.

@KTBS NOT TO BE REPUBLISHED

In the following pair of pictures identify the right and wrong ones keeping air pollution in mind and write the reasons.

ವಾಯುಮಾಲಿನ್ಯವನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಕೊಟ್ಟಿರುವ ಜೋಡಿ ಚಿತ್ರಗಳಲ್ಲಿ ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದನ್ನು ಗುರ್ತಿಸಿ, ಕಾರಣವನ್ನು ಬರೆ.





@KTBS NOT TO BE REPUBLISHED









@KTBS
NOT TO BE REPUBLISHED

LESSON - 7
WATER

F9Y9Z4

Water is very essential for the life of plants and animals. Crops cannot be grown without water. Water is a basic need for all. There are many uses of water. So water is a very important resource. It is called **life liquid**. 71% of the earth surface is covered by water.

ಸಸ್ಯ ಮತ್ತು ಪ್ರಾಣಿಗಳು ಜೀವಿಸಲು ನೀರು ಅತ್ಯವಶ್ಯಕ. ನೀರಿಲ್ಲದೆ ಬೆಳೆ ಬೆಳೆಯಲು ಸಾಧ್ಯವಿಲ್ಲ. ನೀರು ಎಲ್ಲರ ಮೂಲಭೂತ ಅಗತ್ಯವಾಗಿದೆ. ನೀರಿನಿಂದ ಅನೇಕ ಉಪಯೋಗಗಳಿವೆ. ಆದ್ದರಿಂದ ನೀರು ಬಹು ಮುಖ್ಯವಾದ ಸಂಪನ್ಮೂಲವಾಗಿದೆ. ಇದನ್ನು **ಜೀವಜಲ** ಎಂದೂ ಕರೆಯುತ್ತಾರೆ. ಭೂಮಿಯ ಮೇಲ್ಭಾಗ **ಶೇ. 71** ಭಾಗದಷ್ಟು ನೀರಿನಿಂದ ಆವರಿಸಿದೆ.

After studying this lesson you,

ಈ ಪಾಠವನ್ನು ಕಲಿತ ನಂತರ ನೀನು,

- know about the sources of water.
  ನೀರಿನ ಆಕರಗಳ ಬಗ್ಗೆ ತಿಳಿಯುವೆ.
- understand the physical characteristics of water.
  ನೀರಿನ ಭೌತಿಕ ಗುಣಗಳನ್ನು ಅರ್ಥ ಮಾಡಿಕೊಳ್ಳುವೆ.
- appreciate the biological importance of water.
  ನೀರಿನ ಜೈವಿಕ ಪ್ರಾಮುಖ್ಯತೆಯನ್ನು ಪ್ರಶಂಸಿಸುವೆ.
- know the importance of conservation methods of water.
  ನೀರಿನ ಮಹತ್ವ ಮತ್ತು ನೀರಿನ ಸಂರಕ್ಷಣೆಯ ವಿಧಾನಗಳನ್ನು ತಿಳಿಯುವೆ.
- verify the traditional and modern ways of water conservation.
  ಸಾಂಪ್ರದಾಯಿಕ ಮತ್ತು ಆಧುನಿಕ ಜಲ ಸಂರಕ್ಷಣಾ ಕ್ರಮಗಳನ್ನು ಪರಿಶೀಲನೆ ಮಾಡುವೆ.

Recall the distribution of water on the earth, that you have learnt in your previous class.

ಹಿಂದಿನ ತರಗತಿಯಲ್ಲಿ ಕಲಿತ ಭೂಮಿಯ ಮೇಲಿನ ನೀರಿನ ಹಂಚಿಕೆಯನ್ನು ನೆನಪಿಸಿಕೊ.

© KTBS NOT TO BE REPUBLISHED

Answer the questions.

ಈ ಪ್ರಶ್ನೆಗಳಿಗೆ ಉತ್ತರಿಸು.

1. Where can you find more water on the earth?
   ಭೂಮಿಯ ಮೇಲೆ ನೀರು ಹೆಚ್ಚಾಗಿ ಎಲ್ಲಿ ಕಂಡು ಬರುತ್ತದೆ?

   _____

2. What is the consumable quantity of fresh water?
   ಬಳಸಬಹುದಾದ ಸಿಹಿ ನೀರಿನ ಪ್ರಮಾಣ ಎಷ್ಟು?

   _____

3. What are the sources of fresh water?
   ಸಿಹಿ ನೀರು ಯಾವ ಆಕರಗಳಲ್ಲಿ ದೊರೆಯುತ್ತದೆ?

   _____

4. Write here the sources of water that you know.
   ನಿನಗೆ ತಿಳಿದಿರುವ ನೀರಿನ ವಿವಿಧ ಆಕರಗಳ ಹೆಸರನ್ನು ಇಲ್ಲಿ ಬರೆ.

   _____ _____

   _____ _____

   _____ _____

   _____ _____

@KTBS NOT TO BE REPUBLISHED

Rain is the main source of water. Let us know about other sources.

ನೀರಿನ ಮುಖ್ಯ ಮೂಲ ಮಳೆ. ಇದಲ್ಲದೆ ಉಳಿದ ಆಕರಗಳ ಬಗ್ಗೆ ತಿಳಿಯೋಣ.

Oceans : Oceans are the biggest source of water on the earth. **ಸಾಗರಗಳು :** ಭೂಮಿಯ ಮೇಲೆ ಸಾಗರಗಳು ನೀರಿನ ಅತೀ ದೊಡ್ಡ ಆಕರಗಳಾಗಿವೆ.	



Look at this **Globe**. Blue colour indicates the portion of the earth covered by water.

ಈ ಗೋಳವನ್ನು ನೋಡು. ನೀಲಿಬಣ್ಣದಿಂದ ಕೂಡಿರುವ ಭಾಗವು ನೀರಿನಿಂದ ಆವರಿಸಿದ ಭೂಭಾಗವನ್ನು ಸೂಚಿಸುತ್ತದೆ.

Rivers : Rain is the source of river water also. Melted snow from mountains reaches the river during summer. Then rivers overflow. All the rivers flow in their definite route and finally reach the ocean.

ನದಿಗಳು : ನದಿ ನೀರಿಗೂ ಮಳೆಯೇ ಆಧಾರ. ಬೇಸಿಗೆಯಲ್ಲಿ ಹಿಮ ಪರ್ವತಗಳ ಹಿಮ ಕರಗಿ ನದಿಯನ್ನು ಸೇರುತ್ತದೆ. ಆಗ ನದಿಗಳು ತುಂಬಿ ಹರಿಯುತ್ತವೆ. ಎಲ್ಲಾ ನದಿಗಳು ನಿರ್ದಿಷ್ಟ ಮಾರ್ಗದಲ್ಲಿ ಹರಿದು ಕೊನೆಗೆ ಸಾಗರವನ್ನು ಸೇರುತ್ತದೆ.



© KTBS NOT TO BE REPUBLISHED

Name some important rivers of Karnataka.

ಕರ್ನಾಟಕದ ಕೆಲವು ಮುಖ್ಯ ನದಿಗಳನ್ನು ಹೆಸರಿಸು.

_____ _____

_____ _____

_____ _____

Springs

ಚಿಲುಮೆಗಳು




Water that is stored under the earth's crust and comes out due to the pressure through an opening is called **spring**. Rain water which enters the earth through its loose portions will be collected as underground water and this comes out in the form of a spring.

ಭೂ ಕವಚದ ಕೆಳಗೆ ಸಂಗ್ರಹಗೊಂಡಿರುವ ಅಂತರ್ಜಲವು ಒತ್ತಡದಿಂದಾಗಿ ರಂಧ್ರಗಳ ಮೂಲಕ ಹೊರ ಹೊಮ್ಮುತ್ತದೆ. ಇದನ್ನು **ಚಿಲುಮೆ** ಎನ್ನುತ್ತಾರೆ. ಮಳೆಯ ನೀರು ಭೂಮಿಯ ಸಡಿಲ ಭಾಗಗಳ ಮೂಲಕ ಒಳ ಹೊಕ್ಕು ಒಂದೆಡೆ ಸೇರಿ ಅದು ಅಂತರ್ಜಲವಾಗಿ, ಚಿಲುಮೆಗಳ ರೂಪದಲ್ಲಿ ಹೊರಬರುತ್ತದೆ.

Wells

ಬಾವಿಗಳು





Underground water obtained by digging the earth's crust to a certain depth is called well water.

How many types of wells are there? Which are they? Write here.

ಭೂ ಮೇಲ್ಪದರವನ್ನು ಸ್ವಲ್ಪ ಆಳಕ್ಕೆ ಕೊರೆಯುವುದರ ಮೂಲಕ ಪಡೆಯುವ ಅಂತರ್ಜಲದ ನೀರೇ ಬಾವಿ ನೀರು. ಇದರಲ್ಲಿ ಎಷ್ಟು ವಿಧ? ಅವು ಯಾವುವು? ಇಲ್ಲಿ ಬರೆ.


_____ _____

_____ _____

@KTBS NOT TO BE REPUBLISHED



Know this : Due to the excessive utilization of underground water, it is getting exhausted. It can be regained by the absorption of rain water into the earth. Soak pits must be constructed for this purpose. We have to minimise the utilization of underground water and we have to follow some restoration methods like rain water harvesting, and recycling of water.



ಅಂತರ್ಜಲವನ್ನು ಅತಿಯಾಗಿ ಬಳಕೆ ಮಾಡುತ್ತಿರುವುದರಿಂದ ಭೂಮಿಯ ಒಳಗೆ ಸಂಗ್ರಹವಾಗುವ ಅಂತರ್ಜಲವು ಖಾಲಿಯಾಗುತ್ತಿದೆ. ಇದು ಮರು ಪೂರಣವಾಗಲು (ಮತ್ತೆ ಸಂಗ್ರಹವಾಗಲು) ಮಳೆಯ ನೀರು ಭೂಮಿಯ ಒಳಗೆ ಇಂಗುವಂತೆ ಮಾಡಬೇಕು. ಇದಕ್ಕಾಗಿ ಇಂಗುಗುಂಡಿಗಳನ್ನು ನಿರ್ಮಿಸಬೇಕು. ಅತಿಯಾದ ಅಂತರ್ಜಲದ ಬಳಕೆ ಕಡಿಮೆ ಮಾಡಿ, ಮಳೆ ಕೊಯ್ಲು ಮತ್ತು ನೀರಿನ ಪುನರ್ಬಳಕೆಯ ಕ್ರಮಗಳನ್ನು ಅನುಸರಿಸಬೇಕು.

Ponds

ಕೆರೆಗಳು



An artificially man-made low level portion of land, to store water is called a pond. Its capacity of water storage is less. It is constructed in such a way that rain water which drains from high level will be stored here. Rain water reaches ponds by running through rivulets (small streams) also.


ಮಳೆಯ ನೀರನ್ನು ಸಂಗ್ರಹಿಸಲು ಮಾನವರು ಕೃತಕವಾಗಿ ನಿರ್ಮಿಸಿದ ತಗ್ಗು ಭಾಗವೇ ಕೆರೆ. ಕಡಿಮೆ ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಇದಕ್ಕೆ ಇರುತ್ತದೆ. ಬೆಟ್ಟದ ಮೇಲೆ, ಎತ್ತರದ ಸ್ಥಳಗಳಲ್ಲಿ ಬಿದ್ದ ಮಳೆಯ ನೀರು ಹರಿದು ಬಂದು ಇಲ್ಲಿ ಸಂಗ್ರಹವಾಗುವಂತೆ ಇದನ್ನು ನಿರ್ಮಿಸಲಾಗುತ್ತದೆ. ಹಳ್ಳಗಳಿಂದಲೂ ಮಳೆಯ ನೀರು ಹರಿದು ಬಂದು ಕೆರೆಯನ್ನು ಸೇರುತ್ತದೆ.

@KTBS NOT TO BE REPUBLISHED

Reservoires

ಜಲಾಶಯಗಳು

Dams are constructed across the rivers to store water through out the year and to supply water to places where there is scarcity and also for multi purpose projects.These are capable of storing water in large scale and they are called **reservoirs.**



ವರ್ಷವಿಡೀ ನೀರಿನ ಲಭ್ಯತೆಗಾಗಿ, ನೀರಿನ ಕೊರತೆಯಿರುವ ಸ್ಥಳಗಳಿಗೆ ನೀರನ್ನು ಒದಗಿಸಲು ಹಾಗೂ ವಿವಿಧ ಉದ್ದೇಶಗಳಿಗಾಗಿ ನೀರನ್ನು ಬಳಸಲು ನದಿಗಳಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ಕಟ್ಟುತ್ತಾರೆ. ಇದಕ್ಕೆ ಹೆಚ್ಚಿನ ಪ್ರಮಾಣದ ನೀರನ್ನು ಸಂಗ್ರಹಿಸುವ ಸಾಮರ್ಥ್ಯವಿದ್ದು, ಇದನ್ನು **ಜಲಾಶಯ** ಎನ್ನುತ್ತಾರೆ.

Write the names of water reservoirs in Karnataka

ನಿನಗೆ ತಿಳಿದಿರುವ ಕರ್ನಾಟಕದ ಅಣೆಕಟ್ಟುಗಳ ಹೆಸರುಗಳನ್ನು ಬರೆ.

1. _____ 2. _____





Collect the picture of a water reservoir and paste here

ಅಣೆಕಟ್ಟಿನ ಚಿತ್ರ ಸಂಗ್ರಹಿಸಿ, ಇಲ್ಲಿ ಅಂಟಿಸು.

@KTBS NOT TO BE REPUBLISHED

With the help of these pictures note down the differences between a pond and a reservoir in these boxes. Write the uses of these two. (Take the help of the teacher)

ಇಲ್ಲಿರುವ ಚಿತ್ರಗಳ ಸಹಾಯದಿಂದ ಕೆರೆ ಮತ್ತು ಅಣೆಕಟ್ಟಿನ ನಡುವಿನ ವ್ಯತ್ಯಾಸ ಗುರುತಿಸಿ ಚೌಕಗಳಲ್ಲಿ ಬರೆ. ಆನಂತರ ಎರಡರ ಉಪಯೋಗಗಳನ್ನೂ ಬರೆ. (ಶಿಕ್ಷಕರ ಸಹಾಯ ಪಡೆ)



© KTBS NOT TO BE REPUBLISHED

Differences
ವ್ಯತ್ಯಾಸ

Pond ಕೆರೆ	Reservoir ಅಣೆಕಟ್ಟು

Uses
ಉಪಯೋಗಗಳು

Pond ಕೆರೆ	Reservoir ಅಣೆಕಟ್ಟು



Think : Our elders constructed tanks, ponds and open wells to conserve water. Now-a-days reservoirs are constructed to conserve water. Which one is eco friendly among these? Why?

ನಮ್ಮ ಹಿರಿಯರು ಕೆರೆ, ಕುಂಟೆ, ಕಲ್ಯಾಣಿಗಳನ್ನು ನಿರ್ಮಿಸಿ ನೀರನ್ನು ಸಂರಕ್ಷಿಸುತ್ತಿದ್ದರು. ಈಗ ಅಣೆಕಟ್ಟು (ಜಲಾಶಯ)ಗಳನ್ನು ನಿರ್ಮಿಸಿ ಸಂರಕ್ಷಿಸಲಾಗುತ್ತಿದೆ. ಇವೆರಡರಲ್ಲಿ ಯಾವುದು ಪರಿಸರಸ್ನೇಹಿ. ಏಕೆ?

Collect the information about tank/pond/open well or reservoir which are near your locality by visiting with your teacher/an elder.

ಶಿಕ್ಷಕರು/ಹಿರಿಯರ ಜೊತೆಯಲ್ಲಿ ನಿನ್ನ ಊರಿನ ಸಮೀಪವಿರುವ ಕೆರೆ/ಕುಂಟೆ/ಕಲ್ಯಾಣಿ ಅಥವಾ ಅಣೆಕಟ್ಟುಗಳಿಗೆ ಭೇಟಿ ನೀಡಿ, ಈ ಮಾಹಿತಿಯನ್ನು ಸಂಗ್ರಹಿಸು.

- In what kind of place is it constructed?
  ಎಂತಹ ಸ್ಥಳದಲ್ಲಿ ಇದು ನಿರ್ಮಾಣಗೊಂಡಿದೆ?
- How is water collected?
  ನೀರು ಹೇಗೆ ಸಂಗ್ರಹವಾಗುತ್ತದೆ?
- What are its uses?
  ಇದರಿಂದಾಗುವ ಅನುಕೂಲಗಳೇನು?
- In which season of the year will it be full? In which season will it be empty or less? Why?

ವರ್ಷದ ಯಾವ ಕಾಲದಲ್ಲಿ ತುಂಬಿರುತ್ತದೆ? ಯಾವ ಕಾಲದಲ್ಲಿ ನೀರು ಬರಿದಾಗುತ್ತದೆ ಅಥವಾ ಕಡಿಮೆಯಾಗುತ್ತದೆ? ಏಕೆ?

©KTBS NOT TO BE REPUBLISHED

From which source do you collect water in your home and at the school? Write here.

ನಿನ್ನ ಮನೆಯಲ್ಲಿ ಮತ್ತು ಶಾಲೆಯಲ್ಲಿ ನೀರನ್ನು ಯಾವ ಆಕರದಿಂದ ಪಡೆಯುತ್ತಾರೆ. ಎಂಬುದನ್ನು ಇಲ್ಲಿ ಬರೆ.

At home ಮನೆಯಲ್ಲಿ	**At school** ಶಾಲೆಯಲ್ಲಿ

List out the uses of water.

ನೀರಿನ ಉಪಯೋಗಗಳನ್ನು ಪಟ್ಟಿ ಮಾಡು.

At home ಮನೆಯಲ್ಲಿ	**At school** ಶಾಲೆಯಲ್ಲಿ



Know this : In the list of uses that you wrote, have you considered the use for transportation? People also travel on water. Rafts are used for shorter distances and Boats are used to travel and catch fishes. Ships are used to travel longer distances.

@KTBS NOT TO BE REPUBLISHED

ನೀನು ಬರೆದ ಉಪಯೋಗದ ಪಟ್ಟಿಯಲ್ಲಿ ಸಂಚಾರಕ್ಕೆ ಅನುಕೂಲ ಎಂದು ಬರೆದಿರುವೆಯಾ? ನೀರಿನ ಮೂಲಕವೂ ಜನರು ಸಂಚಾರವನ್ನು ಕೈಗೊಳ್ಳುತ್ತಾರೆ. ಸಮೀಪಕ್ಕೆ ತೆಪ್ಪಗಳನ್ನು, ಸ್ವಲ್ಪ ದೂರದ ಪ್ರಯಾಣಕ್ಕೆ ಮತ್ತು ಮೀನು ಹಿಡಿಯಲು ದೋಣಿ/ಬೋಟ್‌ಗಳನ್ನು ಹಾಗೂ ಅತಿ ದೂರದ ಪ್ರಯಾಣಕ್ಕೆ ಹಡಗನ್ನು ಬಳಸುತ್ತಾರೆ.





Do this : Collect flowing rain water in a glass bottle. Collect rain drops directly in a bottle. Look at their colour. Write the difference that you find.

ಹರಿಯುತ್ತಿರುವ ಮಳೆ ನೀರನ್ನು ಒಂದು ಗಾಜಿನ ಬಾಟಲಿನಲ್ಲಿ ಸಂಗ್ರಹಿಸು. ಮಳೆ ಬಂದಾಗ ಮಳೆಯ ನೀರನ್ನು ನೇರವಾಗಿ ಬಾಟಲಿನಲ್ಲಿ ಸಂಗ್ರಹಿಸು ಎರಡರ ಬಣ್ಣವನ್ನು ವೀಕ್ಷಿಸು. ಏನು ವ್ಯತ್ಯಾಸ ಗುರುತಿಸಿದೆ ಎಂದು ಬರೆ.

_____

_____

Take two glasses of water, add a spoon of sugar to one glass and a spoon of salt to another. Stir them and taste both. Write down what you have understood.

ಎರಡು ಲೋಟ ನೀರನ್ನು ತೆಗೆದುಕೊಂಡು, ಒಂದು ಲೋಟದ ನೀರಿಗೆ ಒಂದು ಚಮಚ ಸಕ್ಕರೆಯನ್ನು, ಮತ್ತೊಂದು ಲೋಟದ ನೀರಿಗೆ ಒಂದು ಚಮಚ ಉಪ್ಪನ್ನು ಹಾಕಿ ಚೆನ್ನಾಗಿ ಕಲಕು. ಎರಡೂ ನೀರಿನ ರುಚಿ ನೋಡು. ಇದರಿಂದ ನೀನೇನು ತಿಳಿದೆ ಎಂದು ಬರೆ.

_____

_____

_____

© KTBS NOT TO BE REPUBLISHED

Pure water is colourless, odourless and tasteless. Salts and minerals dissolved in water are the responsible for its taste.

ಶುದ್ಧ ನೀರಿಗೆ ಬಣ್ಣ, ವಾಸನೆ ಮತ್ತು ರುಚಿ ಇರುವುದಿಲ್ಲ. ನೀರಿನ ರುಚಿಗೆ ಅದರಲ್ಲಿ ವಿಲೀನವಾಗಿರುವ ಲವಣ ಮತ್ತು ಖನಿಜಾಂಶಗಳು ಕಾರಣ.

Do these activities with the help of teachers/parents. Then mark (✓) or (×) to the related statements. Correct the wrong statements and write.

ಇಲ್ಲಿ ಕೊಟ್ಟಿರುವ ಚಟುವಟಿಕೆಗಳನ್ನು ಶಿಕ್ಷಕರು/ಪೋಷಕರ ಸಹಾಯದೊಂದಿಗೆ ಮಾಡು. ನಂತರ ಅದಕ್ಕೆ ಸಂಬಂಧಿಸಿದ ಹೇಳಿಕೆಗಳಲ್ಲಿ ಸರಿ (✓), ತಪ್ಪು (X) ಗುರ್ತಿಸು. ತಪ್ಪಾಗಿರುವ ಹೇಳಿಕೆಗಳನ್ನು ಸರಿಪಡಿಸಿ ಬರೆ.

Activity **ಚಟುವಟಿಕೆ**	**Statement** **ಹೇಳಿಕೆ**
• Lift an empty tumbler and a tumbler of the same size filled with water. ಒಂದು ಖಾಲಿ ಲೋಟ ಮತ್ತು ಅದೇ ಅಳತೆಯ ನೀರು ತುಂಬಿದ ಲೋಟವನ್ನು ಕೈಯಿಂದ ಎತ್ತು.	• Water has weight. ನೀರಿಗೆ ತೂಕವಿದೆ. ☐ _____
• Pour a cup of water on the stairs. ಮೆಟ್ಟಿಲ ಮೇಲೆ ಒಂದು ಲೋಟ ನೀರನ್ನು ಹಾಕು.	• Water does not flow from higher level towards lower level. ನೀರು ಎತ್ತರದಿಂದ ತಗ್ಗಿಗೆ ಹರಿಯುವುದಿಲ್ಲ. ☐ _____ _____

© KTBS NOT TO BE REPUBLISHED

• Keep a small vessel filled with water on oven and boil it well. ನೀರಿರುವ ಒಂದು ಚಿಕ್ಕ ಪಾತ್ರೆಯನ್ನು ಒಲೆಯ ಮೇಲಿಟ್ಟು ಚೆನ್ನಾಗಿ ಕುದಿಸು.	• Water evaporates when it boils. ನೀರನ್ನು ಕಾಯಿಸಿದಾಗ ಅದು ಆವಿಯಾಗುತ್ತದೆ. ☐ _____ _____
• Put some specific quantity of water in a glass tumbler, a glass bottle, a glass vessel. ಒಂದು ಅಳತೆಯ ನೀರನ್ನು ಗಾಜಿನ ಲೋಟಕ್ಕೆ, ಗಾಜಿನ ಬಾಟಲಿಗೆ, ಗಾಜಿನ ಡಬ್ಬಕ್ಕೆ ಹಾಕು.	• Water does not take the shape of the container. ನೀರು ತಾನಿರುವ ಪಾತ್ರೆಯ ಆಕಾರವನ್ನು ಪಡೆಯುವುದಿಲ್ಲ. ☐ _____ _____

@KTBS NOT TO BE REPUBLISHED

You have learnt some physical characteristics of water. Water is a liquid substance. You will learn more about it in the lesson **Nature of matter.** Let us learn the biological importance of water.

ನೀರಿನ ಕೆಲವು ಭೌತಿಕ ಲಕ್ಷಣಗಳನ್ನು ತಿಳಿದೆ. ನೀರು ಒಂದು ದ್ರವ ವಸ್ತು. **ವಸ್ತು ಸ್ವರೂಪ** ಪಾಠದಲ್ಲಿ ಈ ಬಗ್ಗೆ ಹೆಚ್ಚಿನ ಅಂಶವನ್ನು ಕಲಿಯುವೆ. ಈಗ ನೀರಿನ ಜೈವಿಕ ಪ್ರಾಮುಖ್ಯತೆಯನ್ನು ತಿಳಿಯೋಣ.

Organisms have enormous quantity of water in their body. Plants and animals have 70% of water in their body. Origin of very early life took place in water. Water is essential for biological activities of plants and animals. Water is required for the growth of plants. Green plants need water for the production of their food.

ಜೀವಿಗಳ ದೇಹದಲ್ಲಿ ನೀರು ಅಧಿಕ ಪ್ರಮಾಣದಲ್ಲಿದೆ. ಸಸ್ಯ ಮತ್ತು ಪ್ರಾಣಿಗಳ ದೇಹದಲ್ಲಿ ಶೇಕಡ 70 ಭಾಗದಷ್ಟು ನೀರಿದೆ. ಮೊತ್ತ ಮೊದಲು ಜೀವ ಉಗಮವಾದದ್ದೇ ನೀರಿನಲ್ಲಿ.

ಸಸ್ಯ ಮತ್ತು ಪ್ರಾಣಿಗಳ ಜೈವಿಕ ಕ್ರಿಯೆಗಳಿಗೆ ನೀರು ಅವಶ್ಯಕ. ಸಸ್ಯಗಳ ಬೆಳವಣಿಗೆಗೆ ನೀರು ಅಗತ್ಯ. ಹಸಿರು ಸಸ್ಯಗಳು ಆಹಾರ ತಯಾರಿಸಲು ನೀರು ಅವಶ್ಯಕ.



Think : What happens if required quantity of water is not supplied to plants?

ಸಸ್ಯಗಳಿಗೆ ಸರಿಯಾದ ಪ್ರಮಾಣದಲ್ಲಿ ನೀರನ್ನು ಒದಗಿಸದಿದ್ದರೆ ಏನಾಗುತ್ತದೆ?

Our elders treated this precious water as an integral part of their life. They reserved a prominent place for water in their family rituals. Have you observed this at your home or in your neighbourhood?

ಇಷ್ಟೆಲ್ಲಾ ಮಹತ್ವವಾದ ನೀರನ್ನು ಹಿಂದಿನವರು ತಮ್ಮ ಜೀವನದಲ್ಲಿ ಒಂದು ಭಾಗವಾಗಿ ನೋಡುತ್ತಿದ್ದರು. ತಮ್ಮ ಮನೆಯ ಆಚರಣೆಗಳಲ್ಲಿ ಒಂದು ಸ್ಥಾನವನ್ನು ನೀರಿಗಾಗಿಯೇ ಮೀಸಲಿಟ್ಟಿದ್ದರು. ಇದನ್ನು ನೀನು ನಿನ್ನ ಮನೆಯಲ್ಲಿ ಅಥವಾ ಅಕ್ಕಪಕ್ಕದವರ ಮನೆಗಳಲ್ಲಿ ಗಮನಿಸಿರುವೆಯಾ?

- Which are the practices of worshipping water that you have seen in your home or in your neighbourhood? When are they celebrated? Write here.

  ನಿನ್ನ ಕುಟುಂಬ ಅಥವಾ ನೆರೆಯ ಕುಟುಂಬಗಳಲ್ಲಿ ನೀರನ್ನು ಪೂಜಿಸುವ ಪದ್ಧತಿಯಿದ್ದರೆ ಅದು ಯಾವುದು ಮತ್ತು ಯಾವಾಗ ಎಂಬುದನ್ನು ಬರೆ.

@KTBS NOT TO BE REPUBLISHED

- How do water sources get polluted?
  ನೀರಿನ ಆಕರಗಳು ಏಕೆ ಕಲುಷಿತಗೊಳ್ಳುತ್ತವೆ?

_____

_____

_____

_____

Water pollution :

ಜಲ ಮಾಲಿನ್ಯ :

Water is physically polluted by mud, garbage, paper, food residuals etc., Water mixed with industrial chemicals, chemical fertilizers and insectisides which have dangerous components turns the water poisionous. Drinking this water may cause diseases like cholera, diarrhea, dysentery etc., Sometimes it may even lead to death. Contaminated water extinguishes the aquatic life also.

ಮಣ್ಣು, ಕಸ, ಪೇಪರ್, ಉಳಿಕೆ ಆಹಾರ ಪದಾರ್ಥಗಳು ಸೇರುವುದರಿಂದ ನೀರು ಭೌತಿಕವಾಗಿ ಕಲುಷಿತಗೊಳ್ಳುತ್ತದೆ. ಕಾರ್ಖಾನೆಗಳಿಂದ ಬರುವ ರಾಸಾಯನಿಕಗಳು ಬೆರೆತ ನೀರು, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳು ಸೇರಿದ ನೀರು ಅಪಾಯಕಾರಿ ಅಂಶಗಳಿಂದ ಕೂಡಿ ವಿಷಯುಕ್ತವಾಗುತ್ತದೆ. ಈ ನೀರನ್ನು ಸೇವಿಸುವುದರಿಂದ ಕಾಲರಾ, ಅತಿಸಾರ, ಆಮಶಂಕೆ ಮುಂತಾದ ರೋಗಗಳು ಬರಬಹುದು. ಕೆಲವೊಮ್ಮೆ ಪ್ರಾಣಕ್ಕೆ ಹಾನಿಯೂ ಸಂಭವಿಸಬಹುದು. ಕಲುಷಿತ ನೀರು ಜಲಚರಗಳ ಸಂತತಿಯ ನಾಶಕ್ಕೂ ಕಾರಣವಾಗುತ್ತದೆ.

NOT TO BE REPUBLISHED © KSEEB











Know this

- You know about the disease cholera, caused by contaminated water. Mosquitoes breed on stagnant water. Mosquitoes spread malaria disease.

  ಕಲುಷಿತ ನೀರಿನಿಂದ ಬರುವ ಕಾಲರಾ ರೋಗದ ಬಗ್ಗೆ ನೀನು ಈಗಾಗಲೇ ತಿಳಿದಿರುವೆ. ನಿಂತ ನೀರಿನಲ್ಲಿ ಸೊಳ್ಳೆಗಳ ಸಂತತಿ ಹೆಚ್ಚಾಗುತ್ತದೆ. ಸೊಳ್ಳೆಗಳಿಂದ ಹರಡುವ ರೋಗ ಮಲೇರಿಯಾ.

- The parasite, Plasmodium is present in the body of the female mosquito called anaphylus. This parasite enters into the human blood when a mosquito bites and fever, shivering, vomiting, head ache and similar other symtoms are seen. This is called malaria. If proper treatment is not given, it may cause death.

  ಪ್ಲಾಸ್ಮೋಡಿಯಮ್ ಎಂಬ ರೋಗಾಣು ಅನಾಫಿಲಿಸ್ ಎಂಬ ಹೆಣ್ಣು ಸೊಳ್ಳೆಯ ಶರೀರದಲ್ಲಿ ಇರುತ್ತದೆ. ಈ ಸೊಳ್ಳೆಯು ಮನುಷ್ಯರನ್ನು ಕಚ್ಚಿದಾಗ ಈ ರೋಗಾಣು ರಕ್ತವನ್ನು ಸೇರಿ ಅತೀ ಜ್ವರ, ಮೈನಡುಕ, ವಾಂತಿ ಮತ್ತು ತಲೆನೋವು ಮುಂತಾದ ರೋಗ ಲಕ್ಷಣಗಳು ಕಂಡುಬರುತ್ತದೆ. ಇದೇ ಮಲೇರಿಯಾ. ಇದಕ್ಕೆ ಸರಿಯಾದ ಚಿಕಿತ್ಸೆ ದೊರೆಯದಿದ್ದರೆ ಸಾವು ಕೂಡ ಸಂಭವಿಸಬಹುದು.

© KTBS NOT TO BE REPUBLISHED


We should not drink contaminated water. Health can be maintained properly by drinking potable water. Prepare and exhibit a chart in your class by discussing with your friends about what you will do to get pure/potable water?

ಕಲುಷಿತ ನೀರನ್ನು ನಾವು ಸೇವಿಸಬಾರದು. ಶುದ್ಧ ನೀರನ್ನು ಕುಡಿಯುವುದರಿಂದ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಕುಡಿಯಲು ಯೋಗ್ಯವಾದ ನೀರನ್ನು ಪಡೆಯಲು ನೀನು ಏನು ಮಾಡುವೆ? ಎಂಬುದನ್ನು ಗೆಳೆಯರೊಂದಿಗೆ ಚರ್ಚಿಸು. ಒಂದು ಚಾರ್ಟ್ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸು.

@KTBS
NOT TO BE REPUBLISHED

LESSON - 8

AGRICULTURE



Read the famous poem (in Kannada) written by Rastrakavi Kuvempu. In this poem, words like Uluva yogi (the person who ploughs), annava dudivane thyagi (the person who sacrifices himself and produces food) have been used. Can you guess who he is? Write your answer in the box given below.

ರಾಷ್ಟ್ರಕವಿ ಕುವೆಂಪು ಬರೆದಿರುವ ಮೇಲಿನ ಹಾಡನ್ನು ಗಮನಿಸು. ಈ ಹಾಡಿನಲ್ಲಿ ಉಳುವ ಯೋಗಿ, ಅನ್ನವ ದುಡಿವನೆ ತ್ಯಾಗಿ ಎಂಬ ಪದಗಳನ್ನು ಬಳಸಲಾಗಿದೆ. ಅಲ್ಲವೆ? ಹಾಗೆಂದರೆ ಯಾರು? ನಿನ್ನ ಉತ್ತರವನ್ನು ಇಲ್ಲಿ ಬರೆ.

NOT TO BE REPUBLISHED

This poem is composed on farmers who provide food for us. Agriculture is the main occupation of the farmers. So farmers are also called agriculturists. Agriculturists engage themselves in agriculture and related activities to lead their life.

ನಮಗೆಲ್ಲಾ ಅನ್ನದಾತ ಎನಿಸಿರುವ ರೈತರ ಬಗ್ಗೆ ಬರೆದ ಹಾಡಿದು. ರೈತರ ಮುಖ್ಯ ಕಸುಬು ಕೃಷಿ. ಹಾಗಾಗಿ ರೈತರನ್ನು ಕೃಷಿಕರು ಎಂತಲೂ ಕರೆಯುತ್ತಾರೆ. ತಮ್ಮ ಜೀವನ ಸಾಗಿಸಲು ಕೃಷಿಕರು, ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ.

Let us know certain informations about agriculture and agriculturists.

ನಾವೀಗ ಕೃಷಿ ಹಾಗೂ ಕೃಷಿಕರ ಬಗ್ಗೆ ಒಂದಷ್ಟು ಮಾಹಿತಿ ತಿಳಿಯೋಣ.

After studying this lesson you,

ಈ ಪಾಠವನ್ನು ಕಲಿತ ನಂತರ ನೀನು,

- understand the various stages of agriculture and from where we get food.

  ಆಹಾರವು ಎಲ್ಲಿಂದ ಬರುತ್ತದೆ ಎಂಬುದನ್ನು ಕೃಷಿಯ ಹಂತಗಳ ಮೂಲಕ ಅರ್ಥೈಸಿಕೊಳ್ಳುವೆ.

- understand the nature of work and the problems of farm labourers, small scale farmers and large scale farmers and give solutions.

  ಕೃಷಿ ಕಾರ್ಮಿಕರು, ಸಣ್ಣ ಕೃಷಿಕರು ಮತ್ತು ದೊಡ್ಡ ಕೃಷಿಕರ ಕೆಲಸಗಳು ಹಾಗೂ ಸಮಸ್ಯೆಗಳ ಬಗ್ಗೆ ತಿಳಿದು ಪರಿಹಾರಗಳನ್ನು ಸೂಚಿಸುವೆ.

- understand organic farming and chemical farming and differentiate it.

  ಸಾವಯವ ಕೃಷಿ ಹಾಗೂ ರಾಸಾಯನಿಕ ಕೃಷಿಯನ್ನು ಅರ್ಥೈಸಿಕೊಂಡು, ವ್ಯತ್ಯಾಸ ಗುರುತಿಸುವೆ.

- know about rain fed agricultural land and irrigated agricultural land.

  ಮಳೆಯಾಧಾರಿತ ಕೃಷಿ ಭೂಮಿ, ನೀರಾವರಿ ಕೃಷಿ ಭೂಮಿ ಬಗ್ಗೆ ಅರಿತುಕೊಳ್ಳುವೆ.

©KTBS NOT TO BE REPUBLISHED

- understand drip irrigation and spray irrigation and make a list of crops grown in both methods.

  ಹನಿ ನೀರಾವರಿ ಹಾಗೂ ತುಂತುರು ನೀರಾವರಿಯನ್ನು ಅರ್ಥೈಸಿಕೊಂಡು ಎರಡೂ ನೀರಾವರಿ ಪದ್ಧತಿಯಲ್ಲಿ ಬೆಳೆಯುವ ಬೆಳೆಗಳನ್ನು ಪಟ್ಟಿ ಮಾಡುವೆ.
- collect information about intensive farming, mixed farming and horticulture.

  ಕೃಷಿ ಜಮೀನಿನಲ್ಲಿ ಕೈಗೊಳ್ಳುವ ಸಾಂದ್ರ ಬೇಸಾಯ, ಮಿಶ್ರ ಬೇಸಾಯ ಹಾಗೂ ತೋಟಗಾರಿಕೆಯ ಬಗ್ಗೆ ಮಾಹಿತಿ ಪಡೆಯುವೆ.
- recognize the modern and traditional methods/systems of seed storage.

  ಧಾನ್ಯ ಸಂಗ್ರಹಣೆಯ ಆಧುನಿಕ ಮತ್ತು ಸಾಂಪ್ರದಾಯಿಕ ವಿಧಾನಗಳು/ಸಾಧನಗಳನ್ನು ಗುರುತಿಸುವೆ.

Remember : Observe the people who are working in the farms and fields. Remember the work they do there. Make a list of them.

ಹೊಲ – ಗದ್ದೆಗಳಲ್ಲಿ ಕೆಲಸ ಮಾಡುವ ಜನರನ್ನು ಗಮನಿಸು. ಅವರು ಮಾಡುವ ಕೆಲಸಗಳನ್ನು ನೆನಪಿಸಿಕೊ/ ವೀಕ್ಷಿಸು. ಅವುಗಳನ್ನು ಇಲ್ಲಿ ಪಟ್ಟಿ ಮಾಡು.

1. _____
2. _____
3. _____
4. _____
5. _____

@KTBS NOT TO BE REPUBLISHED

Crops growing in the districts of Karnataka have been given here. Observe.

ಕರ್ನಾಟಕದ ಜಿಲ್ಲೆಗಳ ಪ್ರಮುಖ ಬೆಳೆಗಳ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ, ಗಮನಿಸು.

Sl. No. ಕ್ರ. ಸಂ.	**District** ಜಿಲ್ಲೆ	**Important crops** ಪ್ರಮುಖ ಬೆಳೆಗಳು
1.	Bidar ಬೀದರ್	redgram, wheat, jowar, sugarcane ತೊಗರಿ, ಗೋಧಿ, ಜೋಳ, ಕಬ್ಬು
2.	Kalaburagi ಕಲಬುರಗಿ	redgram, wheat, jowar, pearl millet, bengalgram, cotton. ತೊಗರಿ, ಗೋಧಿ, ಜೋಳ, ಸಜ್ಜೆ, ಕಡಲೆ, ಹತ್ತಿ
3.	Vijayapura ವಿಜಯಪುರ	redgram, wheat, jowar, pearl millet, bengalgram, sugarcane, grapes ತೊಗರಿ, ಗೋಧಿ, ಜೋಳ, ಸಜ್ಜೆ, ಕಡಲೆ, ಕಬ್ಬು, ದ್ರಾಕ್ಷಿ
4.	Yadagiri ಯಾದಗಿರಿ	jowar, pearl millet, redgram, wheat, paddy, sugarcane ಜೋಳ, ಸಜ್ಜೆ, ತೊಗರಿ, ಗೋಧಿ, ಭತ್ತ, ಕಬ್ಬು
5.	Belagavi ಬೆಳಗಾವಿ	sugarcane, jowar, wheat, bengalgram, groundnut, cotton, tobacco ಕಬ್ಬು, ಜೋಳ, ಗೋಧಿ, ಕಡಲೆ, ಶೇಂಗಾ, ಹತ್ತಿ, ತಂಬಾಕು
6.	Bagalakote ಬಾಗಲಕೋಟೆ	sugarcane, wheat, jowar, pearl millet, bengalgram ಕಬ್ಬು, ಗೋಧಿ, ಜೋಳ, ಸಜ್ಜೆ, ಕಡಲೆ
7.	Raichur ರಾಯಚೂರು	paddy, cotton, jowar, pearl millet, bengalgram, soyabean ಭತ್ತ, ಹತ್ತಿ, ಜೋಳ, ಸಜ್ಜೆ, ಕಡಲೆ, ಸೋಯಾಬೀನ್
8.	Uttara Kannada ಉತ್ತರ ಕನ್ನಡ	paddy, coconut, areca, cardamom, pepper, cashewnut ಭತ್ತ, ತೆಂಗು, ಅಡಿಕೆ, ಏಲಕ್ಕಿ, ಮೆಣಸು, ಗೋಡಂಬಿ

©KTBS NOT TO BE REPUBLISHED

9.	Dharwad ಧಾರವಾಡ	cotton, jowar, wheat, paddy, sugarcane ಹತ್ತಿ, ಜೋಳ, ಗೋಧಿ, ಭತ್ತ, ಕಬ್ಬು
10.	Gadag ಗದಗ	jowar, wheat, groundnut, cotton, sugarcane ಜೋಳ, ಗೋಧಿ, ಶೇಂಗಾ, ಹತ್ತಿ, ಕಬ್ಬು
11.	Koppal ಕೊಪ್ಪಳ	paddy, cotton, pearl millet, redgram, sugarcane, greengram ಭತ್ತ, ಹತ್ತಿ, ಸಜ್ಜೆ, ತೊಗರಿ, ಕಬ್ಬು, ಹೆಸರು
12.	Haveri ಹಾವೇರಿ	cotton, sugarcane, millets, jowar, sunflower ಹತ್ತಿ, ಕಬ್ಬು, ಸಿರಿಧಾನ್ಯಗಳು, ಜೋಳ, ಸೂರ್ಯಕಾಂತಿ
13.	Ballari ಬಳ್ಳಾರಿ	jowar, cotton, paddy, redgram, sunflower ಜೋಳ, ಹತ್ತಿ, ಭತ್ತ, ತೊಗರಿ, ಸೂರ್ಯಕಾಂತಿ
14.	Vijayanagara ವಿಜಯನಗರ	jowar, cotton, paddy, redgram, sunflower ಜೋಳ, ಹತ್ತಿ, ಭತ್ತ, ತೊಗರಿ, ಸೂರ್ಯಕಾಂತಿ
15.	Shivamogga ಶಿವಮೊಗ್ಗ	areca, ragi, coconut, paddy, sugarcane ಅಡಿಕೆ, ರಾಗಿ, ತೆಂಗು, ಭತ್ತ, ಕಬ್ಬು
16.	Davangere ದಾವಣಗೆರೆ	cotton, paddy, maize, ragi, sugarcane ಹತ್ತಿ, ಭತ್ತ, ಮುಸುಕಿನ ಜೋಳ, ರಾಗಿ, ಕಬ್ಬು
17.	Udupi ಉಡುಪಿ	paddy, coconut, areca, wheat, pepper, cashewnut ಭತ್ತ, ತೆಂಗು, ಅಡಿಕೆ, ಗೋಧಿ, ಮೆಣಸು, ಗೋಡಂಬಿ
18.	Chikkamagaluru ಚಿಕ್ಕಮಗಳೂರು	ragi, coffee, paddy, cumin, tea, pepper ರಾಗಿ, ಕಾಫಿ, ಭತ್ತ, ಜೀರಿಗೆ, ಟೀ, ಮೆಣಸು
19.	Chithradurga ಚಿತ್ರದುರ್ಗ	groundnut, maize, cumin, bengalgram ಶೇಂಗಾ, ಮುಸುಕಿನ ಜೋಳ, ಜೀರಿಗೆ, ಕಡಲೆ
20.	Dakshina Kannada ದಕ್ಷಿಣ ಕನ್ನಡ	paddy, coconut, areca, pepper, cashewnut, cocoa ಭತ್ತ, ತೆಂಗು, ಅಡಿಕೆ, ಮೆಣಸು, ಗೋಡಂಬಿ, ಕೋಕೊ

©KTBS NOT TO BE REPUBLISHED

21.	Hassan ಹಾಸನ	paddy, horsegram, ragi, tobacco, coffee, sugarcane, ಭತ್ತ, ಹುರುಳಿ, ರಾಗಿ, ತಂಬಾಕು, ಕಾಫಿ, ಕಬ್ಬು
22.	Tumakuru ತುಮಕೂರು	ragi, groundnut, coconut, greengram, banana, redgram ರಾಗಿ, ಶೇಂಗಾ, ತೆಂಗು, ಹೆಸರುಕಾಳು, ಬಾಳೆ, ತೊಗರಿ
23.	Chikkballapura ಚಿಕ್ಕಬಳ್ಳಾಪುರ	horsegram, ragi, mulberry ಹುರುಳಿ, ರಾಗಿ, ಹಿಪ್ಪುನೇರಳೆ
24.	Kodagu ಕೊಡಗು	coffee, orange, rubber, pepper, ragi, paddy ಕಾಫಿ, ಕಿತ್ತಳೆ, ರಬ್ಬರ್, ಮೆಣಸು, ರಾಗಿ, ಭತ್ತ
25.	Mysuru ಮೈಸೂರು	paddy, ragi, bengalgram, tobacco, sugarcane, groundnut ಭತ್ತ, ರಾಗಿ, ಕಡಲೆ, ತಂಬಾಕು, ಕಬ್ಬು, ಶೇಂಗಾ
26.	Mandya ಮಂಡ್ಯ	paddy, ragi, sugarcane, horsegram ಭತ್ತ, ರಾಗಿ, ಕಬ್ಬು, ಹುರುಳಿ
27.	Bengaluru South (Ramanagara) ಬೆಂಗಳೂರು ದಕ್ಷಿಣ (ರಾಮನಗರ)	ragi, mulberry, horsegram, cowbeans, mango ರಾಗಿ, ಹಿಪ್ಪುನೇರಳೆ, ಹುರುಳಿ, ಅವರೆ, ಮಾವು
28.	Bengaluru rural ಬೆಂಗಳೂರು ಗ್ರಾಮಾಂತರ	ragi, cowbeans, coconut, grapes ರಾಗಿ, ಅವರೆ, ತೆಂಗು, ದ್ರಾಕ್ಷಿ
29.	Bengaluru urban ಬೆಂಗಳೂರು ನಗರ	ragi, horsegram ರಾಗಿ, ಹುರುಳಿ
30.	Kolara ಕೋಲಾರ	ragi, horsegram, mulberry ರಾಗಿ, ಹುರುಳಿ, ಹಿಪ್ಪುನೇರಳೆ
31.	Chamarajanagara ಚಾಮರಾಜನಗರ	ragi, jowar, mulberry, cowbeans sugarcane ರಾಗಿ, ಜೋಳ, ಹಿಪ್ಪುನೇರಳೆ, ಅವರೆ, ಕಬ್ಬು

©KTBS NOT TO BE REPUBLISHED

Make a list of the main crops of your district.

ನಿನ್ನ ಜಿಲ್ಲೆಯ ಪ್ರಮುಖ ಬೆಳೆಗಳನ್ನು ಪಟ್ಟಿ ಮಾಡು.

_____	_____
_____	_____
_____	_____
_____	_____
_____	_____

You have listed out the main crops of your district. Haven't you? Some common steps are followed to grow crops.



ನಿನ್ನ ಜಿಲ್ಲೆಯ ಪ್ರಮುಖ ಬೆಳೆಗಳ ಪಟ್ಟಿ ಮಾಡಿರುವೆಯಲ್ಲವೆ? ಬೆಳೆಗಳನ್ನು ಕೃಷಿ ಭೂಮಿಯಲ್ಲಿ ಬೆಳೆಯಲು ಕೆಲವು ಸಾಮಾನ್ಯ ಹಂತಗಳನ್ನು ಅನುಸರಿಸಲಾಗುವುದು.

Look at the pictures given below. Read the statements given in front of the pictures. The pictures and statements do not match with each other. Match the pictures with the correct statements by drawing a line.

ಈ ಕೆಳಗಿನ ಚಿತ್ರಗಳನ್ನು ಗಮನಿಸು. ಅವುಗಳ ಮುಂದಿನ ಹೇಳಿಕೆಗಳನ್ನು ಓದು. ಚಿತ್ರಗಳಿಗೂ ಮತ್ತು ಹೇಳಿಕೆಗೂ ಜೋಡಣೆ ಸರಿಯಾಗಿಲ್ಲ. ಚಿತ್ರಗಳನ್ನು ಅವುಗಳ ಸರಿಯಾದ ಹೇಳಿಕೆಯೊಂದಿಗೆ ಗೆರೆ ಎಳೆದು ಜೋಡಿಸು.

	Protecting the crop from animals, birds,insects and diseases. ಪ್ರಾಣಿ, ಪಕ್ಷಿ, ಕೀಟಗಳು ಮತ್ತು ರೋಗಗಳಿಂದ ಬೆಳೆಯನ್ನು ರಕ್ಷಿಸುವುದು.
 	Ploughing the land to grow crops. ಬೆಳೆ ಬೆಳೆಯಲು ನೆಲವನ್ನು ಉಳುಮೆ ಮಾಡುವುದು.

TO BE REPUBLISHED

	Sowing the seeds to grow crops. ಬೆಳೆ ಬೆಳೆಯಲು ಬೀಜಗಳನ್ನು ಬಿತ್ತುವುದು.
	using chemicals or organic fertilizers for proper growth of the crop. ಬೆಳೆಗಳು ಚೆನ್ನಾಗಿ ಬೆಳೆಯಲು ರಾಸಾಯನಿಕ ಅಥವಾ ಸಾವಯವ ಗೊಬ್ಬರ ಹಾಕುವುದು.
	Harvesting the crop either manually or with the help of machines. ಯಂತ್ರಗಳು ಅಥವಾ ಕೈಗಳಿಂದ ಬೆಳೆಗಳನ್ನು ಕಟಾವು ಮಾಡುವುದು.
	Irrigation for the proper growth of crops. ಬೆಳೆಗಳು ಚೆನ್ನಾಗಿ ಬೆಳೆಯಲು ನೀರು ಹರಿಸುವುದು.

You have matched the pictures with the correct statements haven't you?

ಚಿತ್ರಗಳನ್ನು ಹೇಳಿಕೆಯೊಂದಿಗೆ ಸರಿಯಾಗಿ ಜೋಡಿಸಿದೆಯಲ್ಲವೆ?

These are the stages of growing crops. You have matched the pictures with the correct statements but they are not in the proper order. Write them in the correct order in the space given below.

ಇವು ಕೃಷಿಕರು ಬೆಳೆ ಬೆಳೆಯಲು ಅನುಸರಿಸುವ ಹಂತಗಳು. ಹೇಳಿಕೆಯನ್ನು ಸರಿಯಾದ ಚಿತ್ರದೊಂದಿಗೆ ನೀನು ಜೋಡಿಸಿರುವೆ. ಆದರೆ ಅವು ಕ್ರಮವಾಗಿಲ್ಲ. ಈ ಹಂತಗಳನ್ನು ಕಾಲಾನುಕ್ರಮವಾಗಿ ಕೆಳಗೆ ಬರೆ.

1. _____

@KTBS NOT TO BE REPUBLISHED

2. _____

3. _____

4. _____

5. _____

6. _____



Think : Plants grown on the agricultural field are called crops. Why?

ಕೃಷಿ ಜಮೀನಿನಲ್ಲಿ ಬೆಳೆಯಲಾಗುವ ಸಸ್ಯಗಳಿಗೆ ಬೆಳೆ ಎನ್ನುವರು. ಏಕೆ?

©KTBS NOT TO BE REPUBLISHED

You know that farmers involve themselves in agriculture related works. The farmers working in the fields are of three categories.

ಕೃಷಿಕರು ಕೃಷಿ ಕಾರ್ಯಗಳಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಾರೆ ಎಂಬುದನ್ನು ನೀನು ತಿಳಿದಿರುವೆ. ಹೊಲಗದ್ದೆಗಳಲ್ಲಿ ಕೆಲಸ ಮಾಡುವ ಕೃಷಿಕರಲ್ಲಿ ಈ ಕೆಳಕಂಡ ಮೂರು ಬಗೆಯ ಕೃಷಿಕರಿರುತ್ತಾರೆ.

1. Farm labourers
   ಕೃಷಿ ಕಾರ್ಮಿಕರು
2. Small scale farmers
   ಸಣ್ಣ ಕೃಷಿಕರು
3. Large scale farmers
   ದೊಡ್ಡ ಕೃಷಿಕರು

Read the information given below. Try to understand the three categories of the farmers. You can take the help of your teacher/elders.

ಕೆಳಗಿನ ಮಾಹಿತಿಯನ್ನು ಓದಿ, ಮೂರು ರೀತಿಯ ಕೃಷಿಕರನ್ನು ಪರಿಚಯಿಸಿಕೊ. ಶಿಕ್ಷಕರು/ ಹಿರಿಯರ ನೆರವು ಪಡೆ.

It is a village. All the people of the village are living with love, faith and peaceful co-existence.


ಅದೊಂದು ಹಳ್ಳಿ. ಆ ಹಳ್ಳಿಯ ಜನರೆಲ್ಲ ಪ್ರೀತಿ, ವಿಶ್ವಾಸ, ಸಹಬಾಳ್ವೆಯಿಂದ ಜೀವನ ನಡೆಸುತ್ತಿರುತ್ತಾರೆ.



Rangamma belongs to the same village. She doesn't have agricultural land of her own. It is her responsibility to manage her family. So she does weeding, planting and separating cotton from the plant in other farms. Julakamma of the same village is a close friend of Rangamma.

ರಂಗಮ್ಮ ಅದೇ ಊರಿನವಳು. ಆಕೆಗೆ ತನ್ನದೆ ಆದ ಸ್ವಂತ ಜಮೀನು ಇಲ್ಲ. ತನ್ನ ಕುಟುಂಬ ನಿರ್ವಹಣೆ ಆಕೆಯ ಜವಾಬ್ದಾರಿಯಾಗಿದೆ. ಅದಕ್ಕಾಗಿ ಆಕೆ ಬೇರೆಯವರ ಜಮೀನಿನಲ್ಲಿ ಕಳೆಕೀಳುವ, ಸಸಿ ನಾಟುವ, ಹತ್ತಿ ಬಿಡಿಸುವಂಥ ಕೃಷಿ ಕೆಲಸ ಮಾಡಲು ಹೋಗುತ್ತಾಳೆ. ಆ ಊರಿನ ಜುಲೇಕಮ್ಮಳಿಗೂ ಆಕೆಗೂ ಗಾಢ ಸ್ನೇಹ.

Julekamma is a farmer. She owns a piece of land. She runs her family by selling crops grown on her farm. Both these women like Manjamma very much.



ಜುಲೇಕಮ್ಮ ಒಬ್ಬ ರೈತ ಮಹಿಳೆ. ಆಕೆಗೆ ತನ್ನದೇ ಆದ ಸ್ವಲ್ಪ ಜಮೀನು ಇದೆ. ತನ್ನ ಜಮೀನಿನಲ್ಲಿ ಬೆಳೆದ ಬೆಳೆಗಳನ್ನು ಮಾರಿ ಬರುವ ಹಣದಿಂದ ತನ್ನ ಕುಟುಂಬ ನಡೆಸುತ್ತಾಳೆ. ಇವರಿಬ್ಬರೂ ಆ ಊರಿನ ಮಂಜಮ್ಮನನ್ನು ಬಹಳ ಇಷ್ಟ ಪಡುತ್ತಾರೆ.

© KTBS NOT TO BE REPUBLISHED



Manjamma is a successful lady agriculturist. She owns about 10-15 acres of land in the village. Many women of the village like Rangamma, work in her agricultural land. Manjamma not only grows crops but also she rears fowl and cattle. She purchases modern agricultural equipments for cultivation purposes. She also earns money through apiculture (rearing honey bees) and sericulture (silkworm breeding). So people of the village call her a large scale farmer. She always encourages and gives suggestions to the villagers to practice agriculture like her.

ಮಂಜಮ್ಮ ಆ ಊರಿನ ಯಶಸ್ವಿ ರೈತ ಮಹಿಳೆ. ಆಕೆಗೆ ತನ್ನದೇ ಆದ 10–15 ಎಕರೆ ಜಮೀನಿದೆ. ಆಕೆಯ ಜಮೀನಿನಲ್ಲಿ ರಂಗಮ್ಮಳಂಥ ಹತ್ತಾರು ಮಹಿಳೆಯರು ಕೃಷಿ ಕಾರ್ಯ ಮಾಡುತ್ತಾರೆ. ಮಂಜಮ್ಮ ತನ್ನ ಜಮೀನಿನಲ್ಲಿ ಬೆಳೆಯನ್ನಷ್ಟೇ ಅಲ್ಲದೆ, ಕೋಳಿ, ಕುರಿ, ದನಕರು ಸಾಕಣೆ ಮಾಡುತ್ತಾಳೆ. ಕೃಷಿ ಮಾಡಲು ದೊಡ್ಡ ಯಂತ್ರಗಳನ್ನು ಖರೀದಿಸಿದ್ದಾಳೆ. ಅಲ್ಲದೆ ಜೇನು ಮತ್ತು ರೇಷ್ಮೆ ಕೃಷಿಯ ಮೂಲಕ ಆಕೆಗೆ ಹಣ ಬರುತ್ತದೆ. ಆದ್ದರಿಂದ ಆ ಊರಿನವರು ಆಕೆಯನ್ನು ದೊಡ್ಡ ಕೃಷಿಕರು ಎಂದು ಗೌರವಿಸುತ್ತಾರೆ. ಮಂಜಮ್ಮ ತನ್ನಂತೆ ಕೃಷಿ ಮಾಡಲು ಆ ಊರಿನವರಿಗೆ ಯಾವಾಗಲೂ ಸಲಹೆ ಕೊಡುತ್ತಿರುತ್ತಾಳೆ.

You have read the information, haven't you? Now match characters in the information with the correct words.

ಮಾಹಿತಿಯನ್ನು ಓದಿದೆಯಲ್ಲವೆ? ಇದರಲ್ಲಿರುವ ಪಾತ್ರಗಳನ್ನು ಸರಿಯಾದ ಪದದೊಂದಿಗೆ ಜೋಡಿಸು.

Rangamma ರಂಗಮ್ಮ	Large scale farmer ದೊಡ್ಡ ಕೃಷಿಕಳು
Julekamma ಜುಲೇಕಮ್ಮ	Farm labourer ಕೃಷಿ ಕಾರ್ಮಿಕಳು
Manjamma ಮಂಜಮ್ಮ	Small scale farmer ಸಣ್ಣ ಕೃಷಿಕಳು

© KTBS NOT TO BE REPUBLISHED

Farm Labourers

ಕೃಷಿ ಕಾರ್ಮಿಕರು

They do not have their own agricultural land. They work in some other person's field to earn their living.

ಇವರಿಗೆ ತಮ್ಮದೇ ಸ್ವಂತ ಜಮೀನು ಇರುವುದಿಲ್ಲ. ತಮ್ಮ ಜೀವನ ಸಾಗಿಸಲು ಬೇರೆಯವರ ಜಮೀನಿನಲ್ಲಿ ಕೆಲಸ ಮಾಡುತ್ತಾರೆ.

Farm labourers have problems of their own. Here are some statements. Put (✓) mark to the statements that are related and (×) mark to that are not related to the problems of the farm labourers.

ಕೃಷಿ ಕಾರ್ಮಿಕರಿಗೆ ತಮ್ಮದೇ ಆದ ಸಮಸ್ಯೆಗಳಿವೆ. ಕೆಳಗೆ ಕೆಲವು ಹೇಳಿಕೆಗಳಿವೆ. ಅವುಗಳಲ್ಲಿ ಕೃಷಿ ಕಾರ್ಮಿಕರ ಸಮಸ್ಯೆಗಳ ಮುಂದೆ (✓) ಅಥವಾ (X) ಗುರುತು ಹಾಕು.

1. Farm labourers do not get work through out the year. ☐

   ಕೃಷಿ ಕಾರ್ಮಿಕರಿಗೆ ವರ್ಷ ಪೂರ್ತಿ ಕೆಲಸ ದೊರೆಯುವುದಿಲ್ಲ.

2. They get very less wage. ☐

   ಕೆಲವೊಮ್ಮೆ ಕೂಲಿ ತುಂಬಾ ಕಡಿಮೆ ಇರುತ್ತದೆ.

3. Farm labourers are very rich. ☐

   ಕೃಷಿ ಕಾರ್ಮಿಕರು ತುಂಬಾ ಶ್ರೀಮಂತರು.

Do this : Meet some farm labourers of your village. (Write the problems that they are facing in the space given below)

ನಿಮ್ಮೂರಿನ ಒಂದಿಬ್ಬರು ಕೃಷಿ ಕಾರ್ಮಿಕರನ್ನು ಭೇಟಿ ಮಾಡು. ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಇಲ್ಲಿ ಬರೆ.

1) _____

2) _____

Many rules have been implemented to solve the problems of the farm labourers.

ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು ಕೆಲವು ನಿಯಮಗಳನ್ನು ಜಾರಿಗೆ ತರಲಾಗಿದೆ.

© KTBS NOT TO BE REPUBLISHED

Example : It is mandatary to give minimum wages to the labourers.

ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ನೀಡುವುದನ್ನು ಕಡ್ಡಾಯ ಮಾಡಲಾಗಿದೆ.



Think : Think about the solutions for the problems of the farm labourers.

ಕೃಷಿಕರ ಸಮಸ್ಯೆಗಳಿಗೆ ಪರಿಹಾರಗಳನ್ನು ಆಲೋಚಿಸು.

Activity : With the help of your teacher make a list of solutions for the problems of farm labourers.

ಶಿಕ್ಷಕರ ನೆರವಿನಿಂದ ಕೃಷಿ ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರಗಳನ್ನು ಕೆಳಗೆ ಪಟ್ಟಿಮಾಡು.

1) _____

2) _____

3) _____

Small scale farmers

ಸಣ್ಣ ಕೃಷಿಕರು

Small scale farmers own a piece of land of their own. They sell the crop, grown in their field and earn money to lead life. They also face a number of problems.

ಸಣ್ಣ ಕೃಷಿಕರಿಗೆ ತಮ್ಮದೇ ಆದ ಸ್ವಲ್ಪ ಜಮೀನು ಇರುತ್ತದೆ. ತಮ್ಮ ಜಮೀನಿನಲ್ಲಿ ಬೆಳೆಯುವ ಬೆಳೆಗಳನ್ನು ಮಾರಿ ಬರುವ ಹಣದಿಂದ ಜೀವನ ಸಾಗಿಸುತ್ತಿರುತ್ತಾರೆ. ಇವರು ಸಹ ಸಮಸ್ಯೆಗಳನ್ನು ಹೊಂದಿದ್ದಾರೆ.

Example :

ಉದಾಹರಣೆ :

- Shortage of money to cultivate the land.

  ಕೃಷಿ ಮಾಡಲು ಹಣದ ಅಭಾವವಿರುತ್ತದೆ.

- As the land holding is little, their earning is not self-sufficient to lead the family.

  ಕೃಷಿ ಜಮೀನು ಕಡಿಮೆ ಇರುವುದರಿಂದ ಕುಟುಂಬ ನಿರ್ವಹಣೆ ಕಷ್ಟವಾಗಿರುತ್ತದೆ.

@KTBS NOT TO BE REPUBLISHED

- Many times they don't get water for the land because of poor irrigation facilities.

  ಕೃಷಿ ಜಮೀನಿಗೆ ನೀರಿನ ಸೌಲಭ್ಯ (ನೀರಾವರಿ) ಕಡಿಮೆ ಇರುತ್ತದೆ. ಹಲವು ಸನ್ನಿವೇಶಗಳಲ್ಲಿ ಜಮೀನಿಗೆ ನೀರು ದೊರೆಯುವುದೇ ಇಲ್ಲ.

- They lack proper guidance to grow crops that suit soil fertility of their land or the seasons.

  ಕೃಷಿ ಭೂಮಿಯ ಫಲವತ್ತತೆಗನುಗುಣವಾಗಿ ಹಾಗೂ ಋತುಮಾನಕ್ಕನುಗುಣವಾಗಿ ಬೆಳೆ ತೆಗೆಯಲು ಇವರಿಗೆ ಸರಿಯಾದ ಮಾರ್ಗದರ್ಶನ ಇರುವುದಿಲ್ಲ.

A number of steps have been taken to solve their problems

ಇವರ ಸಮಸ್ಯೆಗಳನ್ನು ಪರಿಹರಿಸಲು ಹಲವು ಪರಿಹಾರಗಳನ್ನು ಕೈಗೊಳ್ಳಲಾಗಿದೆ.

Example :

ಉದಾಹರಣೆ :

* Monetary aid through bank loans
  ಹಣದ ಸಹಾಯಕ್ಕಾಗಿ ಬ್ಯಾಂಕ್‌ಗಳ ಮೂಲಕ ಸಾಲ ಒದಗಿಸಿದೆ.



* Irrigation facilities through canals.
  ಕಾಲುವೆಗಳ ಮೂಲಕ ನೀರಿನ ಸೌಲಭ್ಯ ಒದಗಿಸಿದೆ.



Apart from these, many more solutions have been provided to these farmers. Make a list of them with the help of your teacher.

ಇವುಗಳಲ್ಲದೆ ಇನ್ನೂ ಅನೇಕ ಪರಿಹಾರಗಳನ್ನು ನೀಡಲಾಗಿದೆ. ಶಿಕ್ಷಕರ ನೆರವು ಪಡೆದು ಅವುಗಳನ್ನು ಇಲ್ಲಿ ಪಟ್ಟಿಮಾಡು.

©KTBS NOT TO BE REPUBLISHED

1) _____

2) _____

3) _____

Large scale farmers

ದೊಡ್ಡ ಕೃಷಿಕರು

Usually large scale farmers own more agricultural land. In addition to family members, many others help them in the agricultural practices.

ಸಾಮಾನ್ಯವಾಗಿ ದೊಡ್ಡ ಕೃಷಿಕರು ಹೆಚ್ಚು ಜಮೀನು ಹೊಂದಿರುತ್ತಾರೆ. ಜಮೀನಿನಲ್ಲಿ ಕೃಷಿ ಕೆಲಸಗಳಿಗಾಗಿ ಕುಟುಂಬದ ಸದಸ್ಯರಲ್ಲದೆ, ಸಹಾಯಕರೂ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ.

Some statements related to large scale farmers are given here. Observe.

ದೊಡ್ಡ ಕೃಷಿಕರ ಬಗೆಗೆ ಕೆಲವು ಹೇಳಿಕೆಗಳನ್ನು ನೀಡಿದೆ. ಗಮನಿಸು.

- They purchase and use modern agricultural equipments.
  ಆಧುನಿಕ ಕೃಷಿಯಂತ್ರಗಳನ್ನು ಖರೀದಿಸಿ, ಬಳಸುತ್ತಾರೆ.
- They store the grains in barns (godowns) and sell it when they get a better price.
  ಧಾನ್ಯಗಳನ್ನು ಉಗ್ರಾಣಗಳಲ್ಲಿ ಸಂಗ್ರಹಿಸಿ ಉತ್ತಮ ಬೆಲೆ ಇದ್ದಾಗ ಮಾರಾಟ ಮಾಡುತ್ತಾರೆ.
- They utilize the monetary facilities of the banks.
  ಬ್ಯಾಂಕ್‌ಗಳ ಹಣಕಾಸು ಸೌಲಭ್ಯವನ್ನು ಉಪಯೋಗಿಸಿಕೊಳ್ಳುತ್ತಾರೆ.
- Their income is high as they grow different crops.
  ವಿವಿಧ ಬೆಳೆಗಳ ಕೃಷಿ ಮಾಡುವುದರಿಂದ ಇವರು ಹೆಚ್ಚಿನ ಆದಾಯ ಹೊಂದಿರುತ್ತಾರೆ.

What are the facilities that large scale farmers get from the banks? Discuss and write in the space given below.

ದೊಡ್ಡ ಕೃಷಿಕರು ಬ್ಯಾಂಕ್‌ಗಳಿಂದ ಪಡೆಯುವ ಸೌಲಭ್ಯಗಳನ್ನು ಚರ್ಚಿಸಿ, ಇಲ್ಲಿ ಬರೆ.

1) _____

2) _____

NOT TO BE REPUBLISHED © KSEEBS



Think : There are many helpers in the field of large scale farmers. Why?

ದೊಡ್ಡ ಕೃಷಿಕರ ಜಮೀನುಗಳಲ್ಲಿ ಹೆಚ್ಚು ಸಹಾಯಕರು ಇರುತ್ತಾರೆ ಏಕೆ?

We know that the farmers do agriculture in their agricultural land. Agricultural land has been classified into two categories.

ಕೃಷಿಕರು ಜಮೀನುಗಳಲ್ಲಿ ಕೃಷಿ ಕಾರ್ಯ ಕೈಗೊಳ್ಳುತ್ತಾರೆ ಎನ್ನುವುದು ನಿನಗೆ ತಿಳಿದಿದೆ. ಕೃಷಿಕರು ಹೊಂದಿರುವ ಕೃಷಿ ಭೂಮಿ (ಜಮೀನು)ಯನ್ನು ಮುಖ್ಯವಾಗಿ ಎರಡು ವಿಧದಲ್ಲಿ ವಿಭಾಗಿಸಲಾಗಿದೆ.

1) **Rain fed agricultural land** 2) **Irrigated agricultural land**

ಮಳೆಯಾಧಾರಿತ ಕೃಷಿ ಭೂಮಿ ನೀರಾವರಿ ಕೃಷಿ ಭೂಮಿ





Farmers grow crops according to the category of the land they own.

ಕೃಷಿಕರು ಈ ಎರಡೂ ಬಗೆಯ ಭೂಮಿಗೆ ಅನುಗುಣವಾಗಿ ಕೃಷಿ ಮಾಡುತ್ತಾರೆ.

1. Rain fed agricultural land

ಮಳೆಯಾಧಾರಿತ ಕೃಷಿ ಭೂಮಿ

Agricultural land which falls under less rainfall areas is called **rain-fed agricultural land**. Crops which require less water and are suitable for that soil, are grown there.

ಮಳೆ ಕಡಿಮೆ ಬೀಳುವ ಪ್ರದೇಶಗಳಲ್ಲಿನ ಜಮೀನು **ಮಳೆಯಾಧಾರಿತ ಕೃಷಿ ಭೂಮಿಯಾಗಿದೆ.** ಕಡಿಮೆ ನೀರನ್ನು ಬಳಸುವ ಬೆಳೆಗಳನ್ನು ಭೂಮಿಯ ಮಣ್ಣಿಗನುಗುಣವಾಗಿ ಬೆಳೆಯುತ್ತಾರೆ.

Rain-fed cultivation is called **kuski** or **dry land** cultivation

ಮಳೆಯಾಧಾರಿತ ಕೃಷಿ ಭೂಮಿಯ ಬೇಸಾಯವನ್ನು ಖುಷ್ಕಿ ಅಥವಾ **ಒಣಭೂಮಿ ಬೇಸಾಯ** ಎಂತಲೂ ಕರೆಯಲಾಗುವುದು.

NOT TO BE REPUBLISHED


Activity : Make a list of crops that are grown in rain fed areas.
ಮಳೆಯ ನೀರನ್ನು ಆಶ್ರಯಿಸಿ ಬೆಳೆಯುವ ಬೆಳೆಗಳ ಪಟ್ಟಿ ತಯಾರಿಸು.

2. Irrigated agricultural land
ನೀರಾವರಿ ಕೃಷಿ ಭೂಮಿ

Water is an important wealth for farmers. Cultivation of crops is impossible without water. Rain is the main source of water. It does not rain in all the seasons. So water is stored in different sources and utilized to cultivate the land by the farmer.

ಕೃಷಿಕರಿಗೆ ನೀರು ಮುಖ್ಯ ಸಂಪತ್ತು. ನೀರಿಲ್ಲದೆ ಬೇಸಾಯ ಮಾಡಲಾಗುವುದಿಲ್ಲ. ನೀರಿನ ಮುಖ್ಯ ಮೂಲ ಮಳೆ. ಮಳೆ ಎಲ್ಲ ಕಾಲದಲ್ಲೂ ಬೀಳದ ಕಾರಣ ನೀರನ್ನು ವಿವಿಧ ಆಕರಗಳಲ್ಲಿ ಸಂಗ್ರಹಿಸಿ ಬೇಸಾಯ ಮಾಡುವುದನ್ನು ಕೃಷಿಕರು ರೂಢಿಸಿಕೊಂಡಿದ್ದಾರೆ.

Observe the pictures given below.
ಕೆಳಗೆ ಕೆಲವು ಚಿತ್ರಗಳನ್ನು ನೀಡಿದೆ ಗಮನಿಸು.



Apart from rain, water is supplied to the crops from ponds, canals, wells and bore wells. Cultivating the land using water from any of these sources is called **irrigated agriculture.**

ಬೆಳೆಗಳಿಗೆ ಮಳೆಯ ನೀರನ್ನು ಹೊರತುಪಡಿಸಿದರೆ ಕೆರೆ, ಕಾಲುವೆ, ಬಾವಿ, ಕೊಳವೆ ಬಾವಿಗಳಿಂದ ನೀರನ್ನು ಪೂರೈಸಲಾಗುತ್ತದೆ. ಹೀಗೆ ನೀರನ್ನು ಬಳಸಿ ಕೃಷಿ ಮಾಡುವುದನ್ನು **ನೀರಾವರಿ ಕೃಷಿ** ಎನ್ನುವರು.

Sugar cane, paddy, cotton, are grown depending upon the soil quality of the irrigated land. These crops are called **irrigated crops**.

ನೀರಾವರಿ ಭೂಮಿಯಲ್ಲಿ ಮಣ್ಣಿಗೆ ತಕ್ಕಂತೆ ಕಬ್ಬು, ಭತ್ತ, ಹತ್ತಿಯಂತಹ ಬೆಳೆಗಳನ್ನು ಬೆಳೆಯುತ್ತಾರೆ. ಅವುಗಳನ್ನು **ನೀರಾವರಿ ಬೆಳೆಗಳು** ಎನ್ನುವರು.

Activity : Make a list of irrigated crops discussing with your friends.
ಗೆಳೆಯರ ಜೊತೆ ಚರ್ಚಿಸಿ, ನೀರಾವರಿ ಬೆಳೆಗಳನ್ನು ಪಟ್ಟಿ ಮಾಡು.

Water is available for agricultural land from ponds, canals, wells and bore wells. They are called **sources of Irrigation.**

ಕೆರೆ, ಕಾಲುವೆ, ಬಾವಿ, ಕೊಳವೆ ಬಾವಿಗಳಿಂದ ರೈತರ ಜಮೀನುಗಳಿಗೆ ನೀರು ದೊರೆಯುವುದರಿಂದ ಇವುಗಳನ್ನು **ನೀರಾವರಿಯ ಆಕರಗಳು** ಎನ್ನುತ್ತಾರೆ.

Farmers who have sources of water follow some typical/ distinct irrigation methods to avoid wastage of water. They are -

ನೀರಾವರಿಯ ಆಕರಗಳಿರುವ ರೈತರು ನೀರು ಹೆಚ್ಚು ಪೋಲಾಗುವುದನ್ನು ತಡೆಗಟ್ಟಲು ವಿಶಿಷ್ಟ ನೀರಾವರಿ ಪದ್ಧತಿಗಳನ್ನು ಅನುಸರಿಸುತ್ತಾರೆ. ಅವುಗಳೆಂದರೆ –

1) **Drip irrigation**
ಹನಿ ನೀರಾವರಿ



2) **Spray (sprinkles) irrigation**
ತುಂತುರು ನೀರಾವರಿ



© KTBS NOT TO BE REPUBLISHED

Look at the pictures, try to understand **drip irrigation** and **spray irrigation**.

ಕೆಳಗಿನ ಚಿತ್ರಗಳನ್ನು ಗಮನಿಸಿ, ಹನಿ ನೀರಾವರಿ ಹಾಗೂ ತುಂತುರು ನೀರಾವರಿಯನ್ನು ಅರ್ಥೈಸಿಕೊ.





In drip irrigation, water is supplied to the roots of the crops drop by drop. In spray irrigation, water is sprayed over the crops uniformly as in rainfall.

ಹನಿ ನೀರಾವರಿಯಲ್ಲಿ ಬೆಳೆಗಳ ಬೇರುಗಳಿಗೆ ನೀರು ಹನಿಹನಿಯಾಗಿ ದೊರೆಯುವಂತೆ ವ್ಯವಸ್ಥೆ ಮಾಡಲಾಗುತ್ತದೆ. ತುಂತುರು ನೀರಾವರಿ ಪದ್ಧತಿಯಲ್ಲಿ ನೀರು ಬೆಳೆಗಳ ಮೇಲೆ ಮಳೆಯಂತೆ ತುಂತುರು ರೂಪದಲ್ಲಿ ಸಮವಾಗಿ ಬೀಳುವಂತೆ ವ್ಯವಸ್ಥೆ ಮಾಡಲಾಗುತ್ತದೆ.

Activity : Make a list of drip irrigated crops and spray irrigated crops (take the help of teachers/elders).

ಹನಿ ನೀರಾವರಿ ಹಾಗೂ ತುಂತುರು ನೀರಾವರಿ ಬಳಸಿ ಬೆಳೆಯಲಾಗುವ ಬೆಳೆಗಳ ಪಟ್ಟಿ ಮಾಡು. (ಶಿಕ್ಷಕರ/ಪೋಷಕರ ನೆರವು ಪಡೆದುಕೊ.)

_____ _____ _____ _____ _____

_____ _____ _____ _____ _____

© KTBS NOT TO BE REPUBLISHED

What are the uses of drip irrigation and spray irrigation? List out here.

ಹನಿ ನೀರಾವರಿ ಹಾಗೂ ತುಂತುರು ನೀರಾವರಿಯ ಉಪಯೋಗಗಳನ್ನು ಕೆಳಗೆ ಪಟ್ಟಿಮಾಡು.

1) _____

2) _____

3) _____

4) _____

5) _____

6) _____



Think : Farmers are advised to adopt drip irrigation in recent years. Why?

ಇತ್ತೀಚಿನ ದಿನಗಳಲ್ಲಿ ರೈತರಿಗೆ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳಲು ತಿಳಿಸಲಾಗುತ್ತದೆ. ಏಕೆ?



Know this : In certain agricultural lands, soil has deficient nutrients. So it is less fertile. It is called barren land. It is not easy to grow crops here. But recently plants such as Jathropa and pangamia (honge) which yield biofuel are being grown in barren land.

ಕೆಲವು ಪ್ರದೇಶಗಳಲ್ಲಿನ ಕೃಷಿ ಭೂಮಿಯು ಅತೀ ಕಡಿಮೆ ಪೋಷಕಾಂಶಗಳನ್ನು ಹೊಂದಿರುತ್ತದೆ. ಸಾಮಾನ್ಯವಾಗಿ ಇದನ್ನು ಬಂಜರು ಭೂಮಿ ಎನ್ನುತ್ತಾರೆ. ಇಲ್ಲಿ ಬೆಳೆಗಳನ್ನು ಸುಲಭವಾಗಿ ಬೆಳೆಯಲು ಸಾಧ್ಯವಿಲ್ಲ. ಆದರೆ ಇತ್ತೀಚೆಗೆ ಬಂಜರು ಭೂಮಿಯಲ್ಲಿ ಜತ್ರೋಪ ಮತ್ತು ಹೊಂಗೆಯಂತಹ ಜೈವಿಕ ಇಂಧನ ಪಡೆಯಲಾಗುವ ಗಿಡ-ಮರಗಳನ್ನು ಬೆಳೆಯಲಾಗುತ್ತಿದೆ.

© KTBS NOT TO BE REPUBLISHED



You have learnt about the types of agricultural land, haven't you? In recent years farmers follow two types of cultivation / farming to grow crops, whether it is rain-fed agricultural land or irrigated agricultural land. **They are -**

ಕೃಷಿ ಭೂಮಿಯ ವಿಧಗಳನ್ನು ತಿಳಿದೆಯಲ್ಲವೆ. ಮಳೆಯಾಶ್ರಿತ ಕೃಷಿ ಭೂಮಿ ಅಥವಾ ನೀರಾವರಿ ಕೃಷಿ ಭೂಮಿ ಯಾವುದೇ ಇದ್ದರೂ ರೈತರು ಇಂದು ಎರಡು ರೀತಿಯ ಕೃಷಿ ಪದ್ಧತಿಗಳನ್ನು ಅನುಸರಿಸಿ ಬೆಳೆ ಬೆಳೆಯುತ್ತಾರೆ. **ಅವುಗಳೆಂದರೆ** –

1) Organic farming
   ಸಾವಯವ ಕೃಷಿ
2) Chemical farming
   ರಾಸಾಯನಿಕ ಕೃಷಿ

To understand these methods, read the statements given below. With the help of your teacher identify the statements related to organic farming and chemical farming. Write them in the respective charts.

ಇವೆರಡರ ಬಗ್ಗೆ ತಿಳಿಯಲು ಕೆಳಗಿನ ಹೇಳಿಕೆಗಳನ್ನು ಓದಿ ಅರ್ಥೈಸಿಕೊ. ಶಿಕ್ಷಕರ ನೆರವಿನಿಂದ ಸಾವಯವ ಮತ್ತು ರಾಸಾಯನಿಕ ಕೃಷಿಯ ಹೇಳಿಕೆಗಳನ್ನು ಗುರುತಿಸು. ಕೆಳಗಿನ ಚಾರ್ಟ್‌ನಲ್ಲಿ ಬರೆ.

© KTBS NOT TO BE REPUBLISHED

Statements
ಹೇಳಿಕೆಗಳು

- Chemical fertilizers are used.
  ರಾಸಾಯನಿಕ ಗೊಬ್ಬರಗಳನ್ನು ಬಳಸಲಾಗುತ್ತದೆ.
- Manure/organic-compost is used for agricultural land.
  ಕೊಟ್ಟಿಗೆ / ತಿಪ್ಪೆಗೊಬ್ಬರವನ್ನು ಕೃಷಿ ಭೂಮಿಗೆ ಬಳಸಲಾಗುತ್ತದೆ.
- Vermi-compost is used to increase the fertility of the soil.
  ಎರೆಹುಳು ಗೊಬ್ಬರವನ್ನು ಮಣ್ಣಿನ ಪೋಷಕಾಂಶ ಹೆಚ್ಚಿಸಲು ಉಪಯೋಗಿಸಲಾಗುತ್ತದೆ.
- Pesticides are used to grow crops.
  ರಾಸಾಯನಿಕ ಪೀಡೆ ನಾಶಕಗಳ ಸಿಂಪಡಣೆ ಮಾಡಿ ಬೆಳೆ ಬೆಳೆಯಲಾಗುತ್ತದೆ.
- Green leaves/dry leaves are also used in this method of cultivation.
  ಹಸಿರೆಲೆ / ಒಣಗಿದ ತರಗೆಲೆಗಳನ್ನೂ ಈ ಕೃಷಿಯಲ್ಲಿ ಬಳಸಲಾಗುತ್ತದೆ.

Organic farming / ಸಾವಯವ ಕೃಷಿ

@KTBS NOT TO BE REPUBLISHED

Chemical farming / ರಾಸಾಯನಿಕ ಕೃಷಿ

In chemical farming, chemical fertilizers and pesticides are used to grow crops. In organic farming manure, green leaves compost, vermi-compost and organic pesticides are used to grow crops.

ರಾಸಾಯನಿಕ ಕೃಷಿಯಲ್ಲಿ ರಾಸಾಯನಿಕ ಗೊಬ್ಬರಗಳು, ಪೀಡೆ ನಾಶಕಗಳನ್ನು ಬಳಸಿ ಬೆಳೆಗಳನ್ನು ಬೆಳೆಯುತ್ತಾರೆ. ಸಾವಯವ ಕೃಷಿಯಲ್ಲಿ ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ, ಎರೆಹುಳು ಗೊಬ್ಬರ, ಸಾವಯವ ಪೀಡೆ ನಾಶಕ ಬಳಸಿ ಬೆಳೆಗಳನ್ನು ಬೆಳೆಯುತ್ತಾರೆ.



Think : Organic farming is better than chemical farming. How?

ರಾಸಾಯನಿಕ ಕೃಷಿಗಿಂತ ಸಾವಯವ ಕೃಷಿ ಉತ್ತಮವಾಗಿದೆ. ಹೇಗೆ?

In agriculture, many methods are being followed to grow crops. **For Example,** Some of the methods of cultivation are given here. Read and understand.

ಕೃಷಿಯಲ್ಲಿ ಹಲವು ವಿಧಾನಗಳನ್ನು ಅನುಸರಿಸಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಉದಾಹರಣೆಗಾಗಿ ಕೆಲವು ಬೇಸಾಯ ವಿಧಾನಗಳನ್ನು ಇಲ್ಲಿ ನೀಡಿದೆ. ಓದಿ ಅರ್ಥೈಸಿಕೊ.

NOT TO BE @KTBS REPUBLISHED

1. **Intensive farming :**
ಸಾಂದ್ರ ಬೇಸಾಯ :

Growing 2 to 3 crops on the same land in a year. **For Example**, jowar, paddy, ragi, sunflower, cotton, horsegram, bengalgram, redgram.

ಒಂದೇ ಕೃಷಿ ಜಮೀನಿನಲ್ಲಿ ವರ್ಷವೊಂದಕ್ಕೆ 2 ರಿಂದ 3 ಬೆಳೆಗಳನ್ನು ಬೆಳೆಯುವುದು.

ಉದಾಹರಣೆಗೆ, ಜೋಳ, ಭತ್ತ, ರಾಗಿ, ಸೂರ್ಯಕಾಂತಿ, ಹತ್ತಿ, ಹುರಳಿ, ಕಡಲೆ, ತೊಗರಿ.

2. **Mixed farming :**
ಮಿಶ್ರ ಬೇಸಾಯ :

In addition to cultivation of crops cattle rearing, poultry, sericulture and apiculture are also done.

ಜಮೀನುಗಳಲ್ಲಿ ಬೆಳೆಗಳನ್ನು ಬೆಳೆಯುವುದರ ಜೊತೆಗೆ ದನಕರು, ಕೋಳಿ, ರೇಷ್ಮೆ, ಜೇನು ಸಾಕಾಣಿಕೆ ಮಾಡುವುದು.

Activity : Many agricultural activities and secondary occupations are also practised in mixed farming. With the help of your teacher make a list of secondary occupations.

ಮಿಶ್ರ ಬೇಸಾಯದಲ್ಲಿ ಹಲವು ಕೃಷಿ ಕಾರ್ಯ ಮತ್ತು ಉಪಕಸುಬುಗಳನ್ನು ಕೈಗೊಳ್ಳಲಾಗುತ್ತದೆ. ಶಿಕ್ಷಕರ ನೆರವಿನಿಂದ ಅವುಗಳನ್ನು ಪಟ್ಟಿ ಮಾಡು.

_____ _____

_____ _____

3. **Plantation farming [Horticulture]**: Fruits, vegetables, coffee, tea or flowers are grown instead of food crops on the agricultural lands.

ತೋಟಗಾರಿಕೆ : ಆಹಾರದ ಬೆಳೆಗಳ ಬದಲಿಗೆ ಕೃಷಿ ಜಮೀನಿನಲ್ಲಿ ವಿವಿಧ ಹಣ್ಣುಗಳು, ತರಕಾರಿ, ಕಾಫಿ, ಟೀ ಅಥವಾ ಹೂಗಳನ್ನು ಬೆಳೆಯುವುದು.

NOT TO BE REPUBLISHED ©KTBS

Activity : Make a list of fruits, vegetables, flowers which can be grown in Plantation farming. Take the help of the elders.

ತೋಟಗಾರಿಕೆಯಲ್ಲಿ ಬೆಳೆಯಲಾಗುವ ವಿವಿಧ ಹಣ್ಣುಗಳು, ತರಕಾರಿ, ಹೂಗಳನ್ನು ಪಟ್ಟಿಮಾಡು. ಹಿರಿಯರ ನೆರವು ಪಡೆದುಕೊ.

_____ _____

_____ _____

Thus, farmers adopt different agricultural methods and earn their income.


ಹೀಗೆ ರೈತರು ತಮ್ಮ ಜಮೀನಿನಲ್ಲಿ ಹಲವು ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಆದಾಯ ಗಳಿಸುತ್ತಾರೆ.

Do this : Go to an agricultural land with your friend. Observe the methods being followed there by the farmers and name them.


ನಿನ್ನ ಗೆಳೆಯ/ಗೆಳತಿಯರ ಜೊತೆ ಸೇರಿ, ಕೃಷಿಕರು ಜಮೀನುಗಳಲ್ಲಿ ಅನುಸರಿಸುವ ಕೃಷಿ ಪದ್ಧತಿಗಳನ್ನು ವೀಕ್ಷಿಸಿ, ಹೆಸರಿಸು.

Observe the pictures given below. Write the corresponding agricultural methods in the space given.

ಕೆಳಗಿನ ಚಿತ್ರಗಳನ್ನು ಗಮನಿಸು. ಅವುಗಳಿಗೆ ಸಂಬಂಧಿಸಿದ ಕೃಷಿ/ಬೇಸಾಯ ಪದ್ಧತಿಗಳನ್ನು ಬರೆ.

Figures **ಚಿತ್ರಗಳು**	**Agricultural methods** **ಸಂಬಂಧಿಸಿದ ಕೃಷಿ/ಬೇಸಾಯ ಪದ್ಧತಿ**
	_____

NOT TO BE REPUBLISHED

	_____
	_____
	_____
	_____
	_____

@KTBS
TO BE REPUBLISHED

Storing and preserving the grains after the harvest of the crop is also very important. Observe these pictures. Some of the methods of storing and preserving the grains have been shown. Identify them with the help of your teacher.

ಕೃಷಿಕರು ಬೆಳೆಗಳನ್ನು ಬೆಳೆದ ನಂತರ ಅವುಗಳನ್ನು ಸಂಗ್ರಹಿಸಿ, ರಕ್ಷಿಸುವುದು ಕೂಡಾ ಮುಖ್ಯ. ಕೆಳಗಿನ ಚಿತ್ರಗಳನ್ನು ಗಮನಿಸು. ಧಾನ್ಯಗಳನ್ನು ಸಂಗ್ರಹಿಸುವ, ಸಂರಕ್ಷಿಸುವ ಕೆಲವು ವಿಧಾನಗಳನ್ನು ನೀಡಿದೆ. ಅವುಗಳನ್ನು ಶಿಕ್ಷಕರ ನೆರವಿನಿಂದ ಗುರುತಿಸು.

In the first two pictures we can see the storage system used in olden days. They are called underground granary (Hagevu) and bamboo granary. These are traditional methods of storing grains.

ಇವುಗಳಲ್ಲಿ ಮೊದಲ ಎರಡು ಚಿತ್ರಗಳಲ್ಲಿರುವ ಸಂಗ್ರಹ ವಿಧಾನವು ನಮ್ಮ ಹಿರಿಯರ ಕೊಡುಗೆಯಾಗಿದೆ. ಅವುಗಳನ್ನು **ಹಗೇವು** ಮತ್ತು **ಬಿದಿರಿನ ಕಣಜ** ಎನ್ನುತ್ತಾರೆ. ಇವು ಧಾನ್ಯಗಳ ಸಂಗ್ರಹಣೆ ಮಾಡುವ ಸಾಂಪ್ರದಾಯಿಕ ವಿಧಾನಗಳಾಗಿವೆ.



NOT TO BE REPUBLISHED

Food grains/products are being grown on large scale. Granaries have been constructed to store and preserve food grains/products. Farmers can preserve their food grain in government granaries in little expense.

ಆಹಾರ ಧಾನ್ಯಗಳು/ ಪದಾರ್ಥಗಳನ್ನು ಹೆಚ್ಚು ಬೆಳೆಯುತ್ತಿರುವುದರಿಂದ ಅವುಗಳನ್ನು ಸಂಗ್ರಹಿಸಿ, ಸಂರಕ್ಷಿಸಲು ಉಗ್ರಾಣಗಳನ್ನು ನಿರ್ಮಿಸಲಾಗಿದೆ. ಸರ್ಕಾರವೆ ನಿರ್ಮಿಸಿದ ಉಗ್ರಾಣಗಳಲ್ಲಿ ರೈತರು ತಮ್ಮ ಧಾನ್ಯಗಳನ್ನು ಅತಿ ಕಡಿಮೆ ಖರ್ಚಿನಲ್ಲಿ ಸಂಗ್ರಹಿಸಬಹುದು.



Think : Preserving grains is essential. Why? How is it useful for both the farmer and buyers. Write here.

ಧಾನ್ಯಗಳ ಸಂರಕ್ಷಣೆ ನಮಗೆ ಅಗತ್ಯ. ಏಕೆ? ಇದರಿಂದ ಕೃಷಿಕರಿಗೆ ಹಾಗೂ ಧಾನ್ಯಗಳನ್ನು ಕೊಳ್ಳುವವರಿಗೆ ಆಗುವ ಅನುಕೂಲವೇನು? ಇಲ್ಲಿ ಬರೆ.

1) _____

_____

2) _____

_____

@KTBS NOT TO BE REPUBLISHED

Agriculture and farmers are like two wheels of a cart. Agriculture is the main occupation of our country. People who lead life following the profession of agriculture are the real food providers (Annadatas). **If the cultivator harvests, the whole world rejoices. If the cultivator fails to harvest, the whole world sobs.** These lines highlights the importance of the farmers.

Let us salute the farmers, the food providers.

ಒಟ್ಟಾರೆ, ಕೃಷಿ ಹಾಗೂ ಕೃಷಿಕರು ಎತ್ತಿನ ಗಾಡಿಯ ಎರಡು ಚಕ್ರಗಳಿದ್ದಂತೆ. ಹೆಚ್ಚು ಜನರಿಗೆ ಕೆಲಸ ನೀಡುವ ಕೃಷಿ ನಮ್ಮ ದೇಶದ ಮುಖ್ಯ ಕಸುಬಾಗಿದೆ. ಕೃಷಿಯನ್ನು ಅವಲಂಬಿಸಿ ಬದುಕು ಸಾಗಿಸುವ ಕೃಷಿಕರೇ ನಮ್ಮ ನಿಜವಾದ ಅನ್ನದಾತರು. **ಒಕ್ಕಲಿಗ ಒಕ್ಕಿದರೆ ನಕ್ಕು ನಲಿವುದು ಜಗವೆಲ್ಲ. ಒಕ್ಕಲಿಗ ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲ** ಎಂಬ ಕವಿವಾಣಿ ಕೃಷಿಕರ ಮಹತ್ವವನ್ನು ತಿಳಿಸುತ್ತದೆ.

ಅನ್ನ ನೀಡುವ ಅನ್ನದಾತರನ್ನು ನಾವೆಲ್ಲರೂ ಗೌರವಿಸೋಣ.

@KTBS
NOT TO BE REPUBLISHED